# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಜನಶ್ರೀವಾಣಿ

ತೋಳ್ಬಲ ಜನಬಲ ಧನಬಲಕ್ಕಿಂತ ಮನೋಬಲವೇ ದೊಡ್ಡದು

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 08 ಪುಟಗಳು: 04 ಬೆಲೆ: 02 ರೂ. ದಿನಾಂಕ: 23-06-2026 ಮಂಗಳವಾರ | 73536 56555


## ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಶಿರಹಟ್ಟಿ ತಾಲೂಕು ಘಟಕದಿಂದ ಸಾರ್ವಜನಿಕ ಶೌಚಾಲಯ, ಸ್ನಾಹಗೃಹ ನಿರ್ಮಿಸಲು ಮನವಿ

ಶಿರಹಟ್ಟಿ: ಪಟ್ಟಣದ ಶ್ರೀ ಫಕ್ಕೀರೇಶ್ವರ ಮಠ ಹಾಗೂ ಹಜರತ್ ಮೆಹಬೂಬ ಸುಬಾನಿ ದರ್ಗಾದ ಮಧ್ಯ ಇರುವ ಹಳ್ಳದ ದಂಡೆಯ ಮೇಲೆ ಸಾರ್ವಜನಿಕ ಶೌಚಾಲಯ ಹಾಗೂ ಸ್ನಾಹಗೃಹ ನಿರ್ಮಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇವೆ ಶಿರಹಟ್ಟಿ ತಾಲೂಕು ಘಟಕದ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.



ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ವಡವಿ ಹಾಗೂ ತಾಲೂಕಾ ಕಾರ್ಯಾಧ್ಯಕ್ಷ ದೇವೇಂದ್ರ ಶಿಂಧೆ ಮಾತನಾಡುತ್ತಾ, ಪಟ್ಟಣದ ಭಾವೈಕ್ಯತೆಯ ಸಂಕೇತವಾದ ಶ್ರೀ ಫಕ್ಕೀರೇಶ್ವರರ ಮಠಕ್ಕೆ ದಿನ ನಿತ್ಯ ಸಾವಿರಾರು ಭಕ್ತರು ದರ್ಶನಕ್ಕೆ ಬರುತ್ತಾರೆ ಮತ್ತು ಜಾತ್ರಾ ಮಹೋತ್ಸವದ ಸಮಯದಲ್ಲಿ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ ಹಾಗೂ ಹಜರತ್ ಮೆಹಬೂಬ ಸುಬಾನಿ ದರ್ಗಾಕ್ಕೆ ನೂರಾರು ಭಕ್ತಾದಿಗಳು ಆಗಮಿಸುವರು. ಆದುದ-ರಿಂದ ಇವುಗಳ ಸಮೀಪ ಹಳ್ಳದ ದಂಡೆಯ ಮೇಲೆ ಸಾರ್ವಜನಿಕ ಶೌಚಾಲಯ ಹಾಗೂ ಸ್ನಾನಗೃಹ ನಿರ್ಮಾಣ ಮಾಡುವದರಿಂದ ಮಹಿಳೆಯರಿಗೆ, ವೃದ್ದರಿಗೆ ಹಾಗೂ ಭಕ್ತಾದಿಗಳಿಗೆ ಅನುಕೂವಾಗಲಿದೆ ಕೂಡಲೇ ಇದರ ಬಗ್ಗೆ ಗಮನಹರಿಸಿ ನಿರ್ಮಾಣ ಮಾಡಬೇಕು ಎಂದು ಹೇಳಿದರು. ಈ ಹಳ್ಳದ ಸುತ್ತ-ಮುತ್ತ ಮೂಲಭೂತ ಸೌಕರ್ಯಗಳ ಕೊರತೆಯಿಂದ ಹಳ್ಳದ ಸುತ್ತ-ಮುತ್ತಲೂ ಶುಚಿತ್ವದ ವಾತಾರವರಣ ರಾರಾಜಿಸುತ್ತಿದೆ. ಪರಿಸರದ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರಿಂದ ಪಟ್ಟಣ ಪಂಚಾಯತ್ ತಾಲೂಕು ಅಧಿಕಾರಿಗಳಾದ ತಾವುಗಳು ಸಂಬಂಧಿಸಿದ ಅಧಿಕಾರಿಗಳ ಜೊತೆ ಚರ್ಚಿಸಿ, ಸ್ಥಳವನ್ನು ಪರಿಶೀಲನೆ ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಒದಗಿಸಬೇಕು ಎಂದರು. ಈ ಸಂದರ್ಭದಲ್ಲಿ ಇಮ್ರಾನ್ ಬಾವಿಕಟ್ಟಿ, ಮಲಿಕ್ ನಗಾರಿ, ತೋರ್ಸಿಫ್ ವಡ್ಡಟ್ಟಿ, ಅನ್ವರ್ ಬರದ್ವಾಡ್, ಮೋದಿನ್ ಪರಿಟ್, ಅಸಿಪ್ ಪಠಾಣ, ಮಂಜು ಭಜಂತ್ರಿ, ದೀಪಾ ಹರಿಪೂರ ಹಾಗೂ ಅನೇಕ ಕಾರ್ಯಕರ್ತರು ಇದ್ದರು.

## ಪ್ರೊ. ಕೆ. ಎಸ್. ಭಗವಾನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಾಜ್ಯ ಸರ್ಕಾರಕ್ಕೆ ಮನವಿ

ಲಕ್ಷ್ಮೇಶ್ವರ :ಹಿಂದೂ ಧರ್ಮ, ಶ್ರೀರಾಮ ಹಾಗೂ ಹಿಂದೂ ದೇವತೆಗಳ ಕುರಿತು ಅವಹೇಳನಕಾರಿ, ಪ್ರಚೋದನಕಾರಿ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹೇಳಿಕೆ ನೀಡಿರುವ ಪ್ರೊ. ಕೆ. ಎಸ್. ಭಗವಾನ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಹಿಂದೂ ಜನಜಾಗೃತಿ ಸಮಿತಿ ಹಾಗೂ ಮುಖಂಡರು ಸೋಮವಾರ ಪಟ್ಟಣದಲ್ಲಿ ತಹಶೀಲ್ದಾರವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ತಹಸೀಲ್ದಾರ ಧನಂಜಯ ಎಂ., ಅವರು ಮನವಿ ಸ್ವೀಕರಿಸಿದರು.



ಮನವಿಯಲ್ಲಿ ಪ್ರೊ. ಕೆ. ಎಸ್. ಭಗವಾನ್ ಅವರು ಸಾರ್ವಜನಿಕ ವೇದಿಕೆಯಲ್ಲಿ ಹಿಂದೂ ಧರ್ಮ, ಶ್ರೀರಾಮನ ಕುರಿತು ಅವಹೇಳನಕಾರಿ ಮತ್ತು ವಿವಾದಾತ್ಮಕ ಹೇಳಿಕೆಗಳನ್ನು ನೀಡಿರುವುದು ಮಾಧ್ಯಮಗಳ ಮೂಲಕ ತಿಳಿದುಬಂದಿದೆ. ಶ್ರೀರಾಮರ ಕುರಿತು ಆಧಾರರಹಿತ ಆರೋಪಗಳನ್ನು ಮಾಡುವುದರ ಜೊತೆಗೆ ಹಿಂದೂ ಧರ್ಮದ ನಂಬಿಕೆಗಳು, ಧಾರ್ಮಿಕ ಆಚ-ರಣೆಗಳು ಮತ್ತು ದೇವತೆಗಳ ಕುರಿತು ಅವಮಾನಕಾರಿಯಾಗಿ ಮಾತನಾಡಿರುವುದು ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡಿದೆ, ಭಗವಾನ್ ಅವರು ಈ ಹಿಂದೆ ಕೂಡ ಶ್ರೀರಾಮ, ಶ್ರೀಕೃಷ್ಣ, ಭಗವದ್ಗೀತೆ ಹಾಗೂ ಹಿಂದೂ ಧರ್ಮಗ್ರಂಥಗಳ ಕುರಿತು ಹಲವು ಬಾರಿ ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ರಾಜ್ಯದಾದ್ಯಂತ ತೀವ್ರ ವಿರೋಧಕ್ಕೆ ಕಾರಣರಾಗಿದ್ದರು. ಅವರ ವಿರುದ್ಧ ವಿವಿಧೆಡೆ ದೂರುಗಳು ದಾಖಲಾಗಿವೆ ಆದರೂ ಸಹ ಅವರು ತಮ್ಮ ಹೇಳಿಕೆಳನ್ನು ನೀಡುತ್ತಾ ಹಿಂದೂಗಳ ಭಾವನೆಗೆ ನೋವುಂಟು ಮಾಡುತ್ತಿದ್ದಾರೆ, ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ್ದರೂ, ಯಾವುದೇ ಧರ್ಮ, ದೇವತೆ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಹೇಳನ ಮಾಡುವ ಹಕ್ಕನ್ನು ನೀಡಿಲ್ಲ. ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹೇಳಿಕೆಗಳು ಸಾರ್ವಜನಿಕ ಶಾಂತಿ ಮತ್ತು ಸೌಹಾರ್ದತೆಗೆ ಅಪಾಯವನ್ನುಂಟು ಮಾಡುತ್ತವೆ. ಇದು ಪದೇ ಪದೇ ನಡೆಯುತ್ತಿರುವದರಿಂದ ಭಗವಾನ್ ಅವರ ವಿರುದ್ಧ ಅನ್ವಯವಾಗುವ ಕಾನೂನು ವಿಧಿಗಳಡಿ ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಮನವಿಯಲ್ಲಿ ವಿನಂತಿಸಲಾಗಿದೆ. ಈ ಸಂದರ್ಭದಲ್ಲಿ ಮಂಜುನಾಥ ಮಾಗಡಿ, ಶಿವರಾಜ ಪಟ್ಟಣಶೆಟ್ಟಿ, ಗಜೇಂದ್ರಗೌಡ ಪಾಟೀಲ, ಹೊನ್ನಪ್ಪ ವಡ್ಡರ, ನಾಗರಾಜ ಚಿಂಚಲಿ, ಎಚ್.ಎಸ್.ವಾಲಿ, ಡಿ.ಎಂ.ಕೊಟಗಿ, ಮಲ್ಲಪ್ಪ ಗೌಡರ, ಮುತ್ತು ನೀರಲಗಿ, ಜಿ.ಎಸ್. ಮಲ್ಲಪ್ಪಗೌಡರ, ಫಕ್ಕೀರಪ್ಪ ಹಾವನೂರು, ಯಲ್ಲಪ್ಪ ಗೌಡ ಪಾಟೀಲ, ಶಂಕರ ಬ್ಯಾಡಗಿ ಮಂಜುನಾಥ ಅಂದಲಗಿ, ಅನುಸೂಯಾ ಸಜ್ಜನ, ಗೀತಾ ಬಡಿಗೇರ,ಹಾಗೂ ಸಮಿತಿಯು ಕಾರ್ಯಕರ್ತರು ಮತ್ತು ಇತರರು ಹಾಜರಿದ್ದರು.


**ಜನಶ್ರೀ ಟೈಮ್ಸ್**

**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**


# ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ : ವರಿಷ್ಠರಿಗೆ ವಿವರಣೆ ನೀಡಲು ರಾಜ್ಯ ಬಿಜೆಪಿ ನಾಯಕರು ದೆಹಲಿಗೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪ-ರಿಷತ್ತಿಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಸಿದ ಪ್ರಕರಣ ಕುರಿತು ವಿವರಣೆ ನೀಡಲು ರಾಜ್ಯ ಬಿಜೆಪಿ ನಾಯಕರು ದೆಹಲಿಗೆ ತೆರಳಿದ್ದಾರೆ. ರಾಜ್ಯ ಬಿಜೆಪಿ ಉಸ್ತುವಾರಿ ಡಾ. ರಾಧಾ ಮೋಹನ್ ಅಗರ್ವಾಲ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರುಗಳು ದೆಹಲಿಗೆ ತೆರಳಿದ್ದು ಪಕ್ಷದ ಪ್ರಮುಖರನ್ನು ಭೇಟಿಯಾಗಿ ಮಾಹಿತಿ ನೀಡಲಿದ್ದಾರೆ.




ನಾಳೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರನ್ನು ಭೇಟಿ ಮಾಡಲಿರುವ ಈ ಮೂವರು ನಾಯಕರು ಅಡ್ಡ ಮತದಾನ ನಡೆಸಿದ ಪ್ರಕರಣ ಹಾಗೂ ಇತ್ತೀಚಿನ ಪಕ್ಷದ ಬೆಳವಣಿಗೆಗಳ ಕುರಿತಂತೆ ಸಮಗ್ರವಾದ ಮಾಹಿತಿಯನ್ನು ನೀಡಲಿದ್ದಾರೆ. ಅಡ್ಡಮತದಾನದ ಹಿಂದಿನ ವಾಸ್ತವಾಂಶಗಳು, ಯಾವ ಶಾಸಕರು ಪಕ್ಷದ ವಿಪ್ ಉಲ್ಲಂಘಿ-ಸಿದ್ದಾರೆ ಎಂಬಿತ್ಯಾದಿ ವಿಷಯಗಳ ಬಗ್ಗೆ ವರಿಷ್ಠರು ಮಾಹಿತಿ ಪಡೆಯಲಿದ್ದಾರೆ. ಇದರ ಆಧಾರದ ಮೇಲೆ ಮುಂದಿನ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ. ಪಕ್ಷದ ಹೈಕಮಾಡ್‌ನ ಈ ನಡೆ, ಪಕ್ಷದಲ್ಲಿ ಶಿಸ್ತನ್ನು ಮರುಸ್ಥಾಪಿಸುವ ಮತ್ತು ಅಡ್ಡಮತದಾನ ಮಾಡಿದವರ ವಿರುದ್ಧ ಕಠಿಣ ನಿರ್ಧಾರ ಕೈಗೊಳ್ಳುವ ಸಂದೇಶವನ್ನು ನೀಡಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ವಿಷಯವು ರಾಜ್ಯ ರಾಜ-ಕೀಯದಲ್ಲಿ ಭಾರೀ ಸಂಚಲನ ಮೂಡಿಸಿದ್ದು, ಈ ಸಂಬಂಧ ಬಿಜೆಪಿ ಹೈಕಮಾಂಡ್ ರಾಜ್ಯ ನಾಯಕರಿಗೆ ಸಮನ್ಸ್ ನೀಡಿತ್ತು. ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ಬಗ್ಗೆ ವಿವರಣೆ ನೀಡಲು ಹಾಗೂ ಈ ಹಿನ್ನಡೆಗೆ ಕಾರಣಗಳನ್ನು ವಿವರಿಸಲು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹಾಗೂ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರಿಗೆ ನಾಳೆ ದೆಹಲಿಗೆ ಬರುವಂತೆ ಸೂಚಿಸಿದ್ದರು.

ಜೂನ್ 18 ರಂದು ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಎನ್‌ಡಿಎ (ಬಿಜೆಪಿ-ಜೆಡಿಎಸ್) ಮೈತ್ರಿಕೂಟದ ನಿರೀಕ್ಷೆಯಂತೆ ಮತಗಳು ಬಾರದಿರುವುದು ಪಕ್ಷದ ಹೈಕಮಾಂಡ್‌ಗೆ ತೀವ್ರ ಅಸಮಾಧಾನ ತಂದಿದೆ. ಸುಮಾರು 11 ಶಾಸಕರು ಅಡ್ಡಮತದಾನ ಮಾಡಿರಬಹುದು ಎಂದು ಅಂದಾಜಿಸಲಾಗಿದೆ. ಈ ಅಡ್ಡಮತದಾನದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಬಿಜೆಪಿ ಘಟಕ, ಸತ್ಯಾಸತ್ಯತೆಯನ್ನು ಪತ್ತೆಹಚ್ಚಲು ಮೂವರು ಸದಸ್ಯರ ಸಮಿತಿಯನ್ನು ರಚಿಸಿದೆ. ಸಮಿತಿಯಲ್ಲಿ ಸಿ.ಟಿ. ರವಿ (ವಿಧಾನ ಪರಿಷತ್ ಸದಸ್ಯ), ಎನ್. ಮಹೇಶ್ (ರಾಜ್ಯ ಉಪಾಧ್ಯಕ್ಷ) ಮತ್ತು ಮಹೇಶ್ ತೆಂಗಿನಕಾಯಿ (ಶಾಸಕ) ಇದ್ದಾರೆ.

ಈ ಸಮಿತಿಯು ಜೂ.25ರ ಒಳಗೆ ವರದಿ ಸಲ್ಲಿಸಬೇಕೆಂದು ಸೂಚಿಸಲಾಗಿದೆ. ಬಿ.ವೈ. ವಿಜಯೇಂದ್ರ ಅವರು, ಪಕ್ಷದ ಶಿಸ್ತನ್ನು ಉಲ್ಲಂಘಿಸಿ ಅಡ್ಡಮತದಾನ ಮಾಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮತ್ತು ಯಾರನ್ನೂ ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅತ್ತ ಮಾಜಿ ಸಿಎಂ ಬಸವರಾಜ ಬೊಮಾಯಿ ಅವರು, ಕಾಂಗ್ರೆಸ್‌ನ ಆಮಿಷಕ್ಕೆ ಬಲಿಬಿದ್ದು ಕೆಲ ಶಾಸಕರು ಈ ರೀತಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಈ ವಿದ್ಯಮಾನವು ರಾಜ್ಯ ಬಿಜೆಪಿ ಘಟಕದಲ್ಲಿ ಮುಂದಿನ ದಿನಗಳಲ್ಲಿ ನಾಯಕತ್ವದ ಬದಲಾವಣೆ ಅಥವಾ ಶಿಸ್ತುಕ್ರಮಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

# ವಡೆಯರ ಮಲ್ಲಾಪುರಕ್ಕೆ ಇಲ್ಲ ರಸ್ತೆ ಭಾಗ್ಯ

ಲಕ್ಷ್ಮೇಶ್ವರ: ತಾಲೂಕಿನ ಗೋವನಾಳ ಗ್ರಾಪಂ ವ್ಯಾಪ್ತಿಗೆ ಬರುವ ವಡೆಯರ ಮಲ್ಲಾಪುರ ಗ್ರಾಮಕ್ಕೆ ರಸ್ತೆ ಭಾಗ್ಯ ಎಂದು, ಸವಣೂರ ರಸ್ತೆಯ ಅಗಡಿ ಇಂಜನೀಯ-ರಿಂಗ್ ಕಾಲೇಜಿನ ಪಕ್ಕದ ರಸ್ತೆ ಮುರಾರ್ಜಿ ದೇಸಾಯಿ ವಸತಿ ಶಾಲೆಯಿಂದ ಅಂ-ದಾಜು 2 ಕಿಲೋಮೀಟರ್ ಗ್ರಾಮವನ್ನು ಸಂಪರ್ಕಿಸುವ ರಸ್ತೆ ದಶಕಗಳಿಂದ ತಗ್ಗು ಗುಂಡಿಗಳಿಂದ ಕೂಡಿದ್ದು ವಾಹನ ಸವಾರರ ಪರಸ್ಥಿತಿ ಹೆಳತೀರದು, ಅದರಲ್ಲೂ ಮಳೆಗಾಲದಲ್ಲಿ ರಸ್ತೆಯ ಪರಸ್ಥಿತಿ ಅಯೋಮಯವಾಗಿರುತ್ತದೆ.



ಶಾಲಾ ಕಾಲೇಜ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ,ವೃದ್ಧರಿಗೆ ದಿನನಿತ್ಯ ಗ್ರಾಮಕ್ಕೆ ಬಸ್ ಗಳ ಕೊರತೆ ಎದ್ದು ಕಾಣುತ್ತಿದೆ ಬೈಕ್, ವಾಹನ ಹಾಗೂ ಕಾಲ್ನಡಿಗೆ ಮುಖಾಂತರ ಗ್ರಾಮಕ್ಕೆ ತಲುಪುವ ಹರಸಾಹಸ ಪಡುತ್ತಿದ್ದಾರೆ, ರಸ್ತೆಯ ಬಗ್ಗೆ ಜನಪ್ರತಿನಿಧಿಗಳಿಗೆ ಅನೇಕ ಬಾರಿ ಗ್ರಾಮಸ್ಥರು ಮನವಿ ಮಾಡಿದರೂ ಇತ ಜನಪ್ರತಿನಿದಿಗಳು ಹಾಗೂ ಅಧಿಕಾರಿಗಳು ಗಮನಹರಿಸುತ್ತಿಲ್ಲವೆಂಬುದು

> **ಬಹಳ ವರ್ಷಗಳಿಂದ ಈ ರಸ್ತೆ ದುರಸ್ಥಿ ಕಂಡಿಲ್ಲ ರಸ್ತೆಯಲ್ಲಿ ದಿನನಿತ್ಯ ಅನೇಕ ಅವಘಡಗಳು ಸಂಭವಿಸುತ್ತಿವೆ ವಿದ್ಯಾರ್ಥಿಗಳಿಗೆ ತೊಂದರೆ ಆಗಿದ್ದು, ಜನಪ್ರತಿನಿದಿಗಳು ಸಂಬಂಧಪಟ್ಟ ಇಲಾಖೆಯವರು ರಸ್ತೆ ನಿರ್ಮಾಣ ಮಾಡಲು ಮುಂದಾಗಬೇಕಾಗಿದೆ,**
>
> **ಪದ್ಮರಾಜ ಪಾಟೀಲ**
> **ಗ್ರಾಪಂ ಮಾಜಿ ಸದಸ್ಯ**



## ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಗದಗ: ರೋಣ ತಾಲ್ಲೂಕಿನ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ 09 ಹುದ್ದೆಗೆ ಹಾಗೂ ಅಂಗನವಾಡಿ ಸಹಾಯಕಿಂ-ಯರ 27 ಹುದ್ದೆಗೆ ಗೌರವಸೇವೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 30 ಕೊನೆಯ ದಿನವಾಗಿದೆ.

ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಅರ್ಜಿಯನ್ನು ಭೌತಿಕವಾಗಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಇತರೆ ಯಾವುದೇ ಮೂಲದಿಂದ (ಅಂಚೆ/ಕೋರಿಯರ್) ಸಲ್ಲಿಸಲು ಅವಕಾಶ ಇರುವುದಿಲ್ಲ ಹಾಗೂ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ಕಛೇರಿ ಕೆಲಸದ ವೇಳೆ ದಿನಾಂಕ:30.07.2026 ಸಾಯಂಕಾಲ 05:30 ಗಂಟೆ ಒಳಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ ಅರ್ಜಿ ಸ್ವೀಕೃತ ವಹಿಯಲ್ಲಿ (ರಜಿಸ್ಟರ್) ತಮ್ಮ ಹೆಸರನ್ನು ದಾಖಲಿಸಿ, ತಮ್ಮ ಅರ್ಜಿಯನ್ನು ಸಂಬಂಧಿಸಿದ ಹುದ್ದೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಅಂಗನವಾಡಿ ಕಾರ್ಯಕರ್ತೆ ಅಥ-ವಾ ಅಂಗನವಾಡಿ ಸಹಾಯಕಿ ಹುದ್ದೆಗೆಂದು ಸ್ಪಷ್ಟವಾಗಿ ನಮೂದಿಸಿ ಸಂಬಂಧಿಸಿದ ಬಾಕ್ಸನಲ್ಲಿ ಹಾಕುವುದು. ಹಾಗೂ ನಿಗದಿತ ಅವಧಿ ಮೀರಿ ಬಂದ ಯಾವುದೇ ದಾಖಲಾತಿಗಳನ್ನು ಸ್ವೀಕ-ರಿಸುವುದಿಲ್ಲ ಹಾಗೂ ಆಯ್ಕೆಗೆ ಪರಿಗಣಿಸುವುದಿಲ್ಲ. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಛೇರಿ, ಎ.ಎಮ್ ಸಾಣಿ ಕಟ್ಟಡ ಗದಗ ರಸ್ತೆ ರೋಣ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ರೋಣ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಧನೆಗೈದ ಯುವಕರಿಗೆ ಭವ್ಯ ಸನ್ಮಾನ

ನರೇಗಲ್ಲ: ಸಮೀಪದ ಜಕ್ಕಲಿ ಗ್ರಾಮದ ಶ್ರೀ ಸ್ವಾಮಿ ವಿವೇಕಾನಂದ ಯುವಕ ಸಂಘ ಹಾಗೂ ಶ್ರೀ ಮಹಾಂತೇಶ್ವರ ಯುವಕ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಗ್ರಾಮಕ್ಕೆ ಕೀರ್ತಿ ತಂದ ಯುವ ಸಾಧಕರಿಗೆ ಭವ್ಯ ಸನ್ಮಾನ ಕಾರ್ಯಕ್ರಮ ಆಯೋಜಿಸಿ ಅಭಿನಂದಿಸಲಾಯಿತು.

ಅಟ್ಯಾ-ಪಟ್ಯಾ ಕ್ರೀಡೆಯಲ್ಲಿ ಭಾರತ ಮಹಿಳಾ ತಂಡಕ್ಕೆ ಆಯ್ಕೆಯಾಗಿರುವ ಪ್ರತಿಭಾವಂತ ಕ್ರೀಡಾಪಟು ಪ್ರೀತಿ ಸುಭಾಷ್ ಬುಳ್ಳಾ ಹಾಗೂ ಅಗ್ನಿವೀರ ಸೇನಾ ಪಡೆಗೆ ಆಯ್ಕೆಯಾಗಿರುವ ಪ್ರಜ್ವಲ್ ಕೋರಿ ಮತ್ತು ಶಂಕ್ರಪ್ಪ ಇಟಗಿ ಅವರನ್ನು ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ರವಿವಾರ ಸಂಜೆ ಸನ್ಮಾನಿಸಿ ಗೌರವಿಸಲಾಯಿತು.



ಕಾರ್ಯಕ್ರಮದ ಮುಖ್ಯ ಅತಿಥಿ-ಯಾಗಿ ಭಾಗವಹಿಸಿದ್ದ ರೋಣ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಮುತ್ತು ಕಡಗದ ಮಾತನಾಡಿ, ಗ್ರಾಮೀಣ ಪ್ರದೇಶದ ಯುವಕರು ತಮ್ಮ ಪ್ರತಿಭೆ, ಪರಿಶ್ರಮ ಹಾಗೂ ದೃಢ ಸಂಕಲ್ಪದ ಮೂಲಕ ರಾಷ್ಟ್ರೀಯ ಮತ್ತು ದೇಶಸೇವೆಯ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು. ಇಂತಹ ಸಾಧಕರು ಇತರ ಯುವಜನತೆಗೆ ಸ್ಫೂರ್ತಿಯಾಗಿದ್ದು, ಅವರ ಸಾಧನೆ ಗ್ರಾಮಕ್ಕೆ ಗೌರವ ಮತ್ತು ಕೀರ್ತಿಯನ್ನು ತಂದಿದೆ ಎಂದು ಶ್ಲಾಘಿಸಿದರು. ಅಟ್ಯಾ-ಪಟ್ಯಾ ಕ್ರೀಡೆಯಲ್ಲಿ ಭಾರತ ಮಹಿಳಾ ತಂಡಕ್ಕೆ ಆಯ್ಕೆಯಾಗಿರುವ ಪ್ರೀತಿ ಬುಳ್ಳಾ ಅವರ ಸಾಧನೆ ಗ್ರಾಮದ ಹೆಮ್ಮೆಯನ್ನು ಮತ್ತಷ್ಟು ಹೆಚ್ಚಿಸಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ದೊರೆತಿ-ರುವುದು ಯುವ ಕ್ರೀಡಾಪಟುಗಳಿಗೆ ಮಾದ-ರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಅದೇ ರೀತಿ ಅಗ್ನಿವೀರ ಸೇನಾ ಪಡೆಗೆ ಆಯ್ಕೆಯಾಗಿರುವ ಪ್ರಜ್ವಲ್ ಕೋರಿ ಹಾಗೂ ಶಂಕ್ರಪ್ಪ ಇಟಗಿ ದೇಶಸೇವೆಯ ಉನ್ನತ ಗು-ರಿಯತ್ತ ಹೆಜ್ಜೆಯಿಟ್ಟಿರುವುದು ಶ್ಲಾಘನೀಯ ಎಂದು ಹೇಳಿದರು.

ಇನ್ನೋರ್ವ ಅತಿಥಿ ಪ್ರಕಾಶ ವಾಲಿ ಮಾತನಾಡಿ, ಯುವಕರು ಸ್ಪಷ್ಟ ಗುರಿಯನ್ನು ಹೊಂದಿ ನಿರಂತರ ಪರಿಶ್ರಮ ಪಟ್ಟರೆ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ತಿಳಿಸಿದರು. ಸನ್ಮಾನ ಸ್ವೀಕ-ರಿಸಿದ ಸಾಧಕರು ತಮ್ಮ ಯಶಸ್ಸಿನ ಹಿಂದೆ ಪಾಲಕರು, ಗುರುಗಳು ಹಾಗೂ ಗ್ರಾಮದ ಹಿರಿಯರ ಮಾರ್ಗದರ್ಶನ ಮತ್ತು ಪ್ರೋತ್ಸಾಹವೇ ಪ್ರಮುಖ ಕಾರಣವಾಗಿದೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಚನ್ನಬಸು ಕೊಪ್ಪದ, ಜಗದೀಶ್ ಪಲ್ಲೇದ, ಮಹಾಂತೇಶ್ ಇಟಗಿ, ನಾಗರಾಜ್ ಕಡಗದ, ಅಶೋಕ ವಾಲಿ, ಶರಣಪ್ಪ ಕೋರಿ, ಆದಾಮಸಾಬ್ ಬಾಲೇಸಾಬನವರ, ಮಹಾಂತೇಶ ಆನೆಹೊಸೂರು, ಸುಭಾಷ್ ಬುಳ್ಳಾ, ಗುರುಪಾದ ವಾಲಿ, ಮಂಜು ಪಲ್ಲೇದ, ಪ್ರವೀಣ್ ವಾಲಿ, ಆನಂದ್ ಕೊಪ್ಪದ, ನಾಗರಾಜ ಸೋಮನಕಟ್ಟಿ, ವಿವೇಕಾನಂದ ಗುಬ್ಬೇನಕೊಪ್ಪ, ಕಂಠಯ್ಯ ರೇಣುಕಮಠ, ಅರುಣ ಬೂದಿಹಾಳ, ಶಿವು ಬಳಗೇರ ಸೇ-ರಿದಂತೆ ಗ್ರಾಮಸ್ಥರು, ಯುವಕರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಯುವ ಸಾಧಕರಿಗೆ ಗೌರವ ಸಲ್ಲಿಸುವ ಈ ಕಾರ್ಯಕ್ರಮವು ಕೇವಲ ಸನ್ಮಾನಕ್ಕೆ ಸೀಮಿತವಾಗದೆ, ಗ್ರಾಮದಲ್ಲಿ ಕ್ರೀಡೆ, ಶಿಕ್ಷಣ ಹಾಗೂ ದೇಶಸೇವೆಯ ಕು-ರಿತು ಯುವಕರಲ್ಲಿ ಹೊಸ ಉತ್ಸಾಹ, ಆತ್ಮವಿಶ್ವಾಸ ಮತ್ತು ಸ್ಫೂರ್ತಿಯನ್ನು ಮೂಡಿಸುವ ವೇದಿಕೆಯಾಗಿತು. ಶಿವಕುಮಾರ್ ಸ್ಟಾಂಪಿನ್ ನಿರೂಪಿಸಿದರು.

## ರಾಜ್ಯದಲ್ಲಿ ಹಂದಿಜ್ವರದ ಭೀತಿ : ಮಂಗಳೂರಿನಲ್ಲಿ ಹೆಚ್1ಎನ್1ಗೆ ವ್ಯಕ್ತಿ ಬಲಿ

**ಬೆಂಗಳೂರು:** ಉತ್ತರ ಕನ್ನಡ ಜಿಲ್ಲೆ ಕಾರವಾರ ಗ್ರಾಮೀಣ ಪ್ರದೇಶದ 41 ವರ್ಷದ ವ್ಯಕ್ತಿಯೊಬ್ಬರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹಂದಿ ಜ್ವರ (ಎಚ್1ಎನ್1) ದಿಂದ ಮೃತಪಟ್ಟಿದ್ದು ಸೋಂಕುಗಳ ಬಗ್ಗೆ ಹೊಸ ಕಳವಳ ವ್ಯಕ್ತವಾಗಿದೆ.




ವರದಿಗಳ ಪ್ರಕಾರ, ಸೋಂಕಿನ ಅನುಮಾನದ ಮೇಲೆ ಕುಟುಂಬ ಸದಸ್ಯರನ್ನು ಸಹ ಮೇಲ್ವಿಚಾರಣೆ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಾವು ಇನ್ಫ್ಲುಯೆನ್ಸ ಯಾವಾಗಲೂ ಸೌಮ್ಯವಾದ ಕಾಯಿಲೆಯಲ್ಲ ಮತ್ತು ಕೆಲವೊಮ್ಮೆ ವಿಶೇಷವಾಗಿ ದುರ್ಬಲ ವ್ಯಕ್ತಿಗಳಲ್ಲಿ ತೀವ್ರ ತೊಡಕುಗಳು, ಆಸ್ಪತ್ರೆಗೆ ಸೇರಿಸುವುದು ಮತ್ತು ಸಾವಿಗೆ ಕಾರಣವನ್ನು ನೆನಪಿಸುತ್ತದೆ. ಎಚ್1ಎನ್1 ವೈರಸ್‌ನಿಂದ ಉಂಟಾಗುವ ಹಂದಿ ಜ್ವರವು 2009 ರ ಸಾಂಕ್ರಾಮಿಕ ರೋಗದ ಸಮಯದಲ್ಲಿ ವಿಶ್ವದಾದ್ಯಂತ ಗಮನ ಸೆಳೆಯಿತು. ಇದನ್ನು ಈಗ ಇತರ ಜ್ವರ ವೈರಸ್‌ಗಳ ಜೊತೆಗೆ ಹರಡುವ ಕಾಲೋಚಿತ ಇನ್ಫ್ಲುಯೆನ್ಸ ತಳಿ ಎಂದು ಪರಿಗಣಿಸಲಾಗಿದ್ದರೂ, ಆರೋಗ್ಯ ತಜ್ಞರು ವಯಸ್ಸಾದವರು, ಗರ್ಭಿಣಿಯರು, ಚಿಕ್ಕ ಮಕ್ಕಳು, ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರು ಮತ್ತು ದುರ್ಬಲಗೊಂಡ ರೋಗನಿರೋಧಕ ಶಕ್ತಿ ಹೊಂದಿರುವವರಿಗೆ ಗಮನಾರ್ಹ ಬೆದರಿಕೆಯನ್ನುಂಟುಮಾಡುತ್ತದೆ ಎಂದು ಗುರುತಿಸಲಾಗಿದೆ. ಆರಂಭಿಕ ರೋಗನಿರ್ಣಯ, ಆಂಟಿವೈರಲ್ ಚಿಕಿತ್ಸೆ, ವ್ಯಾಕ್ಸಿನೇಷನ್ ಮತ್ತು ತಡೆಗಟ್ಟುವ ಕ್ರಮಗಳು ತೀವ್ರ ಅನಾರೋಗ್ಯ ಮತ್ತು ಸಾವುಗಳನ್ನು ಕಡಿಮೆ ಮಾಡುತ್ತವೆ ಅತ್ಯಂತ ಪರಿಣಾಮಕಾರಿ ಮಾರ್ಗ. ಮಂಗಳೂರಿನಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಹಂದಿ ಜ್ವರದ ರೋಗಿಯು ಎಚ್1ಎನ್1 ಸೋಂಕಿಗೆ ಬಲಿಯಾಗಿದ್ದಾನೆ. ಸಂಭಾವ್ಯ ಸೋಂಕುಗಳನ್ನು ಗುರುತಿಸಲು ಮತ್ತು ಹರಡಲು ಮಿತಿಗೊಳಿಸಲು ಆರೋಗ್ಯ ಅಧಿಕಾರಿಗಳು ನಿಕಟ ಕುಟುಂಬಗಳು ಮತ್ತು ಸಂಪರ್ಕಗಳಲ್ಲಿ ಕಣ್ಗಾವಲು ಪ್ರಾರಂಭಿಸಿದ್ದಾರೆ ಎಂದು ವರದಿಯಾಗಿದೆ. ಪ್ರತಿ ವರ್ಷ ಹಂದಿ ಜ್ವರದ ಪ್ರತ್ಯೇಕ ಪ್ರಕರಣಗಳು ಸಂಭವಿಸುತ್ತಿದ್ದರೂ, ಸಾಮಾನ್ಯ ಬದಲಾವಣೆಗಳ ಸಮಯದಲ್ಲಿ ಇನ್ಫ್ಲುಯೆನ್ಸ ಚಟುವಟಿಕೆ ಹೆಚ್ಚಾಗಿ ಸಾರ್ವಜನಿಕ ಆರೋಗ್ಯ ತಜ್ಞರು ಗಮನಿಸುತ್ತಾರೆ, ಇದು ಜಾಗೃತಿ ಮತ್ತು ತಡೆಗಟ್ಟುವ ಕ್ರಮಗಳನ್ನು ಹೊಂದಿದೆ ನಿರ್ಣಾಯಕವಾಗಿಸುತ್ತದೆ. ಹಂದಿ ಜ್ವರ ಎಂದರೇನು ಹಂದಿ ಜ್ವರವು ಇನ್ಫ್ಲುಯೆನ್ಸ (ಎಚ್1ಎನ್1) ವೈರಸ್‌ನಿಂದ ಉಂಟಾಗುವ ಕಾಯಿಲೆಯಾಗಿದೆ. ಸೋಂಕಿತ ಬಾಹ್ಯ ಕೆಮ್ಮಿದಾಗ, ಸೀನುವಾಗ, ಮಾತನಾಡುವಾಗ ಅಥವಾ ಇತರರಿಗೆ ಹತ್ತಿರದಲ್ಲಿ ಉಸಿರಾಡುವಾಗ ಹೊರಬರುವ ಹನಿಗಳು ಮೂಲಕ ವೈರಸ್ ಪ್ರಾಥಮಿಕವಾಗಿ ಹರಡುತ್ತದೆ. ಶಾಲೆಗಳು, ಕಚೇರಿಗಳು, ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳು ಮತ್ತು ಆರೋಗ್ಯ ಸೌಲಭ್ಯಗಳಂತಹ ಜನದಟ್ಟಣೆ ಸೆಟ್ಟಿಂಗ್‌ಗಳಲ್ಲಿ ಇದು ವೇಗವಾಗಿ ಹರಡಬಹುದು.ಹೆಚ್ಚಿನ ಜನರು ಒಂದು ವಾರದೊಳಗೆ ಚೇತರಿಸಿಕೊಳ್ಳುತ್ತಾರೆ, ಆದರೆ ಶ್ವಾಸಕೋಶಗಳು ಮತ್ತು ಇತರ ಅಂಗಗಳ ಮೇಲೆ ಪರಿಣಾಮ ಬೀರುವ ತೀವ್ರತೆ ತೊಡಕುಗಳನ್ನು ಬೆಳೆಸಿಕೊಳ್ಳುತ್ತಾರೆ. ಗಮನಿಸಬೇಕಾದ ಸಾಮಾನ್ಯ ಲಕ್ಷಣಗಳು; ಜ್ವರ ಮತ್ತು ಶೀತ, ನಿರಂತರ ಕೆಮ್ಮುಗಂಟಲು ನೋವು, ಸ್ರವಿಸುವ ಅಥವಾ ನಿರ್ಬಂಧಿಸಿದ ಮೂಗು, ತಲೆನೋವು, ಸ್ನಾಯು ನೋವು ಮತ್ತು ದೇಹದ ನೋವು, ದಣಿವು ಮತ್ತು ದೌರ್ಬಲ್ಯ, ಹಸಿವಿನ ನಷ್ಟ, ಸಾಂದರ್ಭಿಕವಾಗಿ ವಾಕರಿಕೆ, ವಾಂತಿ ಅಥವಾ ಅತಿಸಾರ, ತೀವ್ರತರವಾದ ಪ್ರಕರಣಗಳಲ್ಲಿ, ಲಕ್ಷಣಗಳು ಗಂಟಲಿನ ತೊಂದರೆ, ಎದೆ ನೋವು, ಗೊಂದಲ ಅಥವಾ ಕಡಿಮೆ ಆಮ್ಲಜನಕ ಮಟ್ಟಗಳು ಕಡಿಮೆಯಾಗುವುದು.

## ಮೆಸ್ಕಾಂ ನೌಕರರೊಬ್ಬರ ಮೊಬೈಲ್ ಕದ್ದು ಬ್ಯಾಂಕ್ ಖಾತೆಯಲ್ಲಿದ್ದ ಹಣ ಖಾಲಿ ಮಾಡಿದ ಖದೀಮರು

**ಚಿಕ್ಕಮಗಳೂರು:** ಮೆಸ್ಕಾಂ ನೌಕರರೊಬ್ಬರ ಮೊಬೈಲ್ ಕಳವು ಮಾಡಿದ ಖದೀಮರು ಆ ಮೊಬೈಲ್ ಬಳಸಿಕೊಂಡು ಖಾತೆಯಲ್ಲಿದ್ದ ಹಣವನ್ನು ಖಾಲಿ ಮಾಡಿರುವ ಘಟನೆ ಕಡೂರಿನಲ್ಲಿ ನಡೆದಿದೆ. ಆಲ್ದೂರು ಮೂಲದ ಮೆಸ್ಕಾಂ ನೌಕರ ಪ್ರದೀಪ್ ಎಂಬುವರು ಕಡೂರು ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಅವರ ಮೊಬೈಲ್ ಕಳ್ಳತನವಾಗಿತ್ತು. ಕೂಡಲೇ ಆಲ್ದೂರಿಗೆ ಆಗಮಿಸಿದ ಅವರು ಪೊಲೀಸರ ಮಾರ್ಗದರ್ಶನದಂತೆ ಲಾಸ್ಟ್ ರಿಪೋರ್ಟ್ ಎಂಬ ಪೋರ್ಟಲ್‌ನಲ್ಲಿ ಮೊಬೈಲ್‌ನ ಎಲ್ಲಾ ದಾಖಲೆಯ ವರದಿಯನ್ನು ಸಲ್ಲಿಕೆ ಮಾಡಿ ಮೊಬೈಲ್ ಬ್ಲಾಕ್ ಮಾಡಿಸಿದ್ದರು.



ಬಳಿಕ ಕಳೆದುಹೋದ ಸಿಮ್ ಕಾರ್ಡ್ ಬದಲಾಗಿ ಹೊಸ ಸಿಮ್ ಕಾರ್ಡ್ ಖರೀದಿಸಿ ಅಂದೇ ಸಿಮ್ ಆಕ್ಟಿವೇಶನ್ ಮಾಡಿಸಿಕೊಂಡಿದ್ದರು. ಬಳಿಕ ಹೊಸತಾಗಿ ಮತ್ತೊಂದು ಮೊಬೈಲನ್ನು ಆನ್ಲೈನ್ ಮೂಲಕ ಆರ್ಡರ್ ಮಾಡಲು ಹೋದಾಗ ತಮ ಖಾತೆಯಲ್ಲಿ ಹಣ ಇಲ್ಲದಿರುವುದು ಅರಿವಿಗೆ ಬಂದಿದೆ. ಕೂಡಲೇ ಬ್ಯಾಂಕ್‌ನಲ್ಲಿ ತಮ ಖಾತೆ ಬಗ್ಗೆ ವಿಚಾರ ಮಾಡಿದಾಗ 1,03,923 ರೂ. ಇದ್ದ ಬ್ಯಾಲೆನ್ಸ್ ಮೊಬೈಲ್ ಕಳೆದು ಹೋದ ಬಳಿಕ 9,873 ರೂ. ಆಗಿರುವುದು ತಿಳಿದು ಬಂದಿದೆ. ಕೂಡಲೇ ಬ್ಯಾಂಕ್‌ನ ಎಲ್ಲಾ ಸೇವೆಗಳನ್ನು ತಾತ್ಕಾಲಿಕವಾಗಿ ಬ್ಲಾಕ್ ಮಾಡಿಸಿ ಆಲ್ದೂರು ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ತಮ ಖಾತೆಯಿಂದ ಅಕ್ರಮವಾಗಿ 94,050 ರೂ. ವರ್ಗಾವಣೆ ಮಾಡಿದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಜೊತೆಗೆ ಹಣ ಕೊಡಿಸುವಂತೆ ಪೊಲೀಸರಿಗೆ ದೂರು ನೀಡಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಭೀಮಾ ತೀರದಲ್ಲಿ ಪೊಲೀಸ್ ಫೈರಿಂಗ್ : 6 ಮಂದಿ ಹತ್ಯೆ ಪ್ರಕರಣ ಪ್ರಮುಖ ಆರೋಪಿ ಮಹೇಶ್ ಸೆರೆ

**ಬೆಂಗಳೂರು:** ಭೀಮಾ ತೀರದಲ್ಲಿ ಒಂದೇ ಕುಟುಂಬದ ಐದು ಮಂದಿ ಸೇರಿದಂತೆ ಆರು ಮಂದಿಯನ್ನು ಭೀಕರವಾಗಿ ಹತ್ಯೆ ಮಾಡಿದ್ದ ಪ್ರಕರಣದ ಪ್ರಮುಖ ಆರೋಪಿ, ಸುಪಾರಿ ಕಿಲ್ಲರ್ ಪೊಲೀಸರ ಗುಂಡೇಟಿನಿಂದ ಗಾಯಗೊಂಡು ಸಿಕ್ಕಿಬಿದ್ದಿದ್ದಾನೆ.

ಆರೋಪಿ ಮಹೇಶ್ ಚಂದ್ರಕಾಂತ್ ತಳವಾರ್ (29) ಬಲಗಾಲಿಗೆ ಗುಂಡೇಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ವಿಜಯಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಇಟ್ಟಂಗಿಹಾಳ ಗ್ರಾಮದ ಸುಮಾರು 1 ಕಿಮೀ ದೂರದಲ್ಲಿ ಇಂದು ಮುಂಜಾನೆ 5.30 ರ ಸುಮಾರಿನಲ್ಲಿ ಆರೋಪಿ ಮಹೇಶ್ ಬಚ್ಚಿಟ್ಟುಕೊಂಡಿರುವ ಬಗ್ಗೆ ಚಡಚಣ ವೃತ್ತ ಸರ್ಕಲ್ ಇನ್?ಸಪೆಕ್ಟರ್ ಪರಶುರಾಮ್ ಮನಗೂಳಿ ಅವರಿಗೆ ಮಾಹಿತಿ ಲಭಿಸಿದೆ. ಈ ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನು ಬಂಧಿಸಲು ಇನ್?ಸಪೆಕ್ಟರ್ ಮತ್ತು ಅವರ ಸಿಬ್ಬಂದಿಗಳಾದ ಶೇಖರ್ ಪವಾರ್, ವಿಜಯಕುಮಾರ್ ಬನಸೋಡೆ ಹಾಗೂ ಇನ್ನಿತರರೊಂದಿಗೆ ಸ್ಥಳಕ್ಕೆ ತೆರಳಿದ್ದಾರೆ. ಆ ಸಂದರ್ಭದಲ್ಲಿ ಪೊಲೀಸರನ್ನು ನೋಡಿದ ಆರೋಪಿ ಮಹೇಶ್ ಚಂದ್ರಕಾಂತ್ ಏಕಾಏಕಿ ಸಿಬ್ಬಂದಿಗಳ ಮೇಲೆ ಕಲ್ಲಿನಿಂದ ದಾಳಿ ನಡೆಸಿ



ಪರಾರಿಯಾಗಲು ಯತ್ನಿಸಿದ್ದಾನೆ. ತಕ್ಷಣ ಸಿಪಿಐ ಪರಶುರಾಮ್ ಅವರು ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಸಿದ್ದಾರೆ.

ಪೊಲೀಸರ ಮಾತಿಗೆ ಕಿವಿಗೊಡದೇ ಮತ್ತೆ ಕಲ್ಲಿನಿಂದ ದಾಳಿ ನಡೆಸಿದಾಗ ಆತ್ಮರಕ್ಷಣೆಗಾಗಿ ಸಿಪಿಐ ಹಾರಿಸಿದ ಗುಂಡು ಆತನ ಬಲಗಾಲಿಗೆ ತಗುಲಿ ಕುಸಿದು ಬಿದ್ದಿದ್ದಾನೆ. ತಕ್ಷಣ ಪೊಲೀಸರು ಆತನನ್ನು ಸುತ್ತುವರೆದು ವಶಕ್ಕೆ ಪಡೆದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಆರೋಪಿಯು ಭೀಮಾತೀರದ ಒಂದೇ ಕುಟುಂಬದ ಐದು ಮಂದಿ ಸೇರಿದಂತೆ ಆರು ಜನರನ್ನು ಕೊಲೆ ಮಾಡಲು 15 ಲಕ್ಷ ಸುಪಾರಿ ಪಡೆದಿದ್ದ ಎಂಬುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

**ಘಟನೆ ಹಿನ್ನಲೆ:**

ಜಮೀನು ವಿಚಾರಕ್ಕೆ ಆರೋಪಿ ಮಹೇಶ್ ತಳವಾರ್, ಭೀಮಾತೀರದ ಗೋವಿಂದಪುರ ಗ್ರಾಮದ ಚಡಚಣದ ನಿರಾಳೆ ಕುಟುಂಬವೊಂದರ ಮೇಲೆ ದ್ವೇಷ ಸಾಧಿಸುತ್ತಿದ್ದನು.ಕಳೆದ ಮೇ 29 ರಂದು ಗೋವಿಂದಪುರ ಗ್ರಾಮದ ಜಮೀನಿನಲ್ಲಿ ನಿರಾಳೆ ಕುಟುಂಬದ ಐದು ಮಂದಿ ಹಾಗೂ ಸ್ಥಳೀಯ ನಿವಾಸಿ ಸೇರಿದಂತೆ 15 ಮಂದಿ ಕೆಲಸ ಮಾಡುತ್ತಿದ್ದರು.,ಒಂದೇ ಜಾಗದಲ್ಲಿ ಕುಟುಂಬದ ಐದು ಮಂದಿ ಇರುವುದನ್ನು ಗಮನಿಸಿದ ಆರೋಪಿ ಮಹೇಶ್ ಮತ್ತು ಅವನ ಸಹಚರರು ಇದೇ ಸರಿಯಾದ ಸಮಯವೆಂದು ತಿಳಿದು ತನ್ನ ಸಹಚರರೊಂದಿಗೆ ಸೇರಿಕೊಂಡು ಏಕಾಏಕಿ ಲಾಂಗ್, ಮಚ್ಚುಗಳಿಂದ ದಾಳಿ ಮಾಡಿದ್ದು, ಅಲ್ಲದೇ ಬಂದೂಕುಗಳಿಂದ ಗುಂಡು ಹಾರಿಸಿ ಆರು ಮಂದಿಯನ್ನು ಭೀಕರವಾಗಿ ಕೊಲೆ ಮಾಡಿ ಪರಾರಿಯಾಗಿದ್ದರು.

ದಾಳಿ ನಡೆಯುತ್ತಿದ್ದಂತೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೆಲವರು ಎದ್ದೆವೋ, ಬಿದ್ದಿವೋ ಎಂಬಂತೆ ಸ್ಥಳದಿಂದ ಓಡಿ ಹೋಗಿ ಪ್ರಾಣ ಉಳಿಸಿಕೊಂಡಿದ್ದಾರೆ.

ಈ ಪ್ರಕರಣ ಭೀಮಾ ತೀರವನ್ನಷ್ಟೇ ಅಲ್ಲದೇ ರಾಜ್ಯದ ಗಮನ ಸೆಳೆದಿತ್ತು. ಅಂದಿನಿಂದ ತಲೆ ಮರೆಸಿಕೊಂಡು ಅಡ್ಡಾಡುತ್ತಿದ್ದ ಪ್ರಮುಖ ಆರೋಪಿಯನ್ನು ಕೊನೆಗೂ ಪೊಲೀಸರು ತಮ ಖೆಡ್ಡಾಗೆ ಬೀಳಿಸಿಕೊಂಡಿದ್ದಾರೆ.ಈ ಪ್ರಕರಣದಲ್ಲಿ ಇದುವರೆಗೂ 38 ಮಂದಿಯನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರೆದಿದೆ.

## ಗುರುದ್ವಾರಕ್ಕೆ ನುಗ್ಗಿ ಸಿಖ್ ಭಕ್ತರನ್ನು ಒತ್ತೆಯಾಳಾಗಿರಿಸಿಕೊಂಡ ಶಸ್ತ್ರಸಜ್ಜಿತ ನಿಹಾಂಗ್ ಗುಂಪು

**ರುದ್ರಪ್ರಯಾಗ:** ಇತ್ತಿಚೆಗೆ ಚಮೋಲಿಯಲ್ಲಿ ನಡೆದ ಘರ್ಷಣೆಯ ನಂತರ ಬಂಧಿಸಲಾದ ತಮ್ಮ ಪಂಥದ ನಾಲ್ವರು ಸದಸ್ಯರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಈಟಿ ಮತ್ತು ಕತ್ತಿಗಳಿಂದ ಶಸ್ತ್ರಸಜ್ಜಿತವಾದ ನಿಹಾಂಗ್‌ಗಳ ಗುಂಪೊಂದು ಇಲ್ಲಿನ ಗುರುದ್ವಾರಕ್ಕೆ ನುಗ್ಗಿ ಕಟ್ಟಡದ ಛಾವಣಿಯ ಮೇಲೆ ಸಿಖ್ ಭಕ್ತರನ್ನು ಒತ್ತೆಯಾಳಾಗಿ ಇರಿಸಿಕೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೂನ್ 16 ರಂದು ಚಮೋಲಿಯಲ್ಲಿ ನಡೆದ ಘರ್ಷಣೆಯ ನಂತರ ಬಂಧಿಸಲಾದ ತಮ್ಮ ಪಂಥದ ನಾಲ್ವರು ಸದಸ್ಯರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಈ ಒತ್ತೆ ಪ್ರಕರಣ ನಡೆದಿದ್ದು, ಸ್ಥಳದಲ್ಲಿ ಭಾರೀ ಪೊಲೀಸ್ ಪಡೆ ನಿಯೋಜಿಸಲಾಗಿದೆ, ಆದರೂ ಜಿಲ್ಲಾಡಳಿತ ಪರಿಸ್ಥಿತಿ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ ಮತ್ತು ಶಾಂತಿಯುತವಾಗಿದೆ ಎಂದು ಹೇಳಿದೆ. ಒತ್ತೆಯಾಳು ಪರಿಸ್ಥಿತಿಯನ್ನು ಕೊನೆಗೊಳಿಸುವ ಬಗ್ಗೆ ಪೊಲೀಸರು ನಿಹಾಂಗ್ ಸದಸ್ಯರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ಪೊಲೀಸರು, ಜಿಲ್ಲಾಡಳಿತ ಮತ್ತು ಗುರುದ್ವಾರ ನಿರ್ವಹಣಾ ಸಮಿತಿಯು ನಿಹಾಂಗ್ ಸಿಖ್ಖರೊಂದಿಗೆ ನಿರಂತರ ಮಾತುಕತೆ ನಡೆಸುತ್ತಿದೆ, ಅವರ ಕಳವಳಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ರುದ್ರಪ್ರಯಾಗ ಪೊಲೀಸ್ ವರಿಷ್ಠಾಧಿಕಾರಿ ನಿಹಾರಿಕಾ ತೋಮರ್ ಹೇಳಿದರು.ಮಾತುಕತೆಗಳು ಸಕಾರಾತ್ಮಕ ಫಲಿತಾಂಶಗಳನ್ನು ನೀಡಿವೆ; ನಿಹಾಂಗ್‌ಗಳಲ್ಲಿ ಒಬ್ಬರು ಆಡಳಿತ ಮತ್ತು ಪೊಲೀಸರೊಂದಿಗೆ ಮಾತನಾಡಲು ಛಾವಣಿಯಿಂದ ಇಳಿದಿದ್ದಾರೆ ಮತ್ತು ಉಳಿದ ವ್ಯಕ್ತಿಗಳೊಂದಿಗೆ ಸಂಭಾಷಣೆ ನಡೆಯುತ್ತಿದೆ ಎಂದು ಅವರು ಹೇಳಿದರು.

ಜಿಲ್ಲಾ ಮ್ಯಾಜಿಸ್ಟ್ರೇಟ್ ವಿಶಾಲ್ ಮಿಶ್ರಾ ಅವರು ನೀಡಿದ ಹೇಳಿಕೆಯ ಪ್ರಕಾರ, ನಿಹಾಂಗ್‌ಗಳು ಮೂರನೇ ಮಹಡಿಗೆ ಬೀಗ ಹಾಕಿದ್ದಾರೆ, ಅಲ್ಲಿ ಅವರು ವೃದ್ಧ ಸಿಖ್ ವ್ಯಕ್ತಿಯನ್ನು ಒತ್ತೆಯಾಳಾಗಿ ಇರಿಸಿಕೊಂಡಿದ್ದಾರೆ.ಚಮೋಲಿಯ ಕರ್ಣಪ್ರಯಾಗದಲ್ಲಿ ನಡೆದ ಘರ್ಷಣೆಗೆ ಸಂಬಂಧಿಸಿದಂತೆ ತಮ್ಮ ಪಂಥದ ನಾಲ್ವರು ಸದಸ್ಯರ ಬಂಧನದ ವಿರುದ್ಧ ಪ್ರದರ್ಶನಕ್ಕೆ ಬರುವ ಪ್ರತಿಭಟನಾಕಾರರನ್ನು ಇರಿಸಲು ನಿಹಾಂಗ್‌ಗಳು 50-60 ಕೊಠಡಿಗಳನ್ನು ಕೇಳಿದ್ದಾರೆ ಎಂದು ಗುರುದ್ವಾರ ಆಡಳಿತ ಮಂಡಳಿ ತಿಳಿಸಿದೆ. ಗುರುದ್ವಾರ ಅದನ್ನು ಮಾಡಲು ವಿಫಲವಾದಾಗ, ನಿಹಾಂಗ್‌ಗಳು ಹಿಂಸಾಚಾರಕ್ಕೆ ಇಳಿದರು, ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು ಎಂದು ಅವರು ಹೇಳಿದರು.ಪೊಲೀಸರ ಪ್ರಕಾರ, ನಿಹಾಂಗ್‌ಗಳು ವಿಧ್ವಂಸಕ ಕೃತ್ಯದಲ್ಲಿ ತೊಡಗಿದರು ಮತ್ತು ನಂತರ ಗುರುದ್ವಾರದಲ್ಲಿದ್ದ ಸಿಖ್ ವ್ಯಕ್ತಿಯನ್ನು ಮೇಲ್ಛಾವಣಿಗೆ ಕರೆದೊಯ್ದು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ಅವರು ಈಟಿಗಳು, ಕತ್ತಿಗಳು, ಕೊಡಲಿಗಳು ಮತ್ತು ಕಿರ್ಪಣಗಳನ್ನು ಹೊಂದಿದ್ದಾರೆ ಎಂದು ಅವರು ಹೇಳಿದರು.

ಗುರುದ್ವಾರದೊಳಗೆ ಆಂತರಿಕ ವಿವಾದ ನಡೆದಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸರು ಮತ್ತು ಆಡಳಿತ ಅಧಿಕಾರಿಗಳು ಸ್ಥಳದಲ್ಲಿದ್ದಾರೆ. ಯಾವುದೇ ರೀತಿಯ ಅಡ್ಡಿ ಇಲ್ಲ. ಎಲ್ಲವೂ ಶಾಂತಿಯುತವಾಗಿ ನಡೆಯುತ್ತಿದೆ.ಹೇಮಕುಂಡ್ ಸಾಹಿಬ್ ತೀರ್ಥಯಾತ್ರೆ ಮುಂದುವರೆದಿದ್ದು, ಗುರುದ್ವಾರದಲ್ಲಿ ಅರ್ದಾಸ್, ಲಂಗರ್ ಮುಂತಾದ ಚಟುವಟಿಕೆಗಳು ಎಂದಿನಂತೆ ನಡೆಯುತ್ತಿವೆ ಎಂದು ಅವರು ಹೇಳಿದರು. ಜೂನ್ 16 ರಂದು ಕರ್ಣಪ್ರಯಾಗ ಮಾರುಕಟ್ಟೆಯ ಹೋಟೆಲ್ ಬಳಿ ಪಾರ್ಕಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಘರ್ಷಣೆಗೆ ಸಂಬಂಧಿಸಿದಂತೆ ನಾಲ್ವರು ನಿಹಾಂಗ್‌ಗಳನ್ನು ಬಂಧಿಸಲಾಯಿತು. ಹೇಮಕುಂಡ್ ಸಾಹಿಬ್ ಗುರುದ್ವಾರದಿಂದ ಈ ಗುಂಪು ಹಿಂತಿರುಗುತ್ತಿದ್ದಾಗ ಮಾರುಕಟ್ಟೆಯಲ್ಲಿ ಸ್ಥಳೀಯರೊಂದಿಗೆ ಮಾತಿನ ಚಕಮಕಿ ನಡೆಯಿತು.ಯಾತ್ರಿಕರು ಇನ್ನೊಂದು ಗುಂಪಿನ ಮೇಲೆ ಕತ್ತಿಗಳಿಂದ ದಾಳಿ ಮಾಡಿದ್ದಾರೆ, ಇದರಿಂದಾಗಿ ನಾಲ್ವರು ಸ್ಥಳೀಯರು ಗಾಯಗೊಂಡಿದ್ದಾರೆ. ಘರ್ಷಣೆಯಲ್ಲಿ ಒಬ್ಬ ನಿಹಾಂಗ್ ಕೂಡ ಗಾಯಗೊಂಡಿದ್ದಾರೆ.ಪರಿಣಾಮವಾಗಿ, ಪಂಜಾಬ್‌ನ ಮೊಹಾಲಿಯ ನಾಲ್ವರು ನಿಹಾಂಗ್‌ಗಳನ್ನು ಬಂಧಿಸಲಾಯಿತು.ನಂತರ, ಕೆಲವು ನಿಹಾಂಗ್‌ಗಳು ನಾಗರಸು ಗುರುದ್ವಾರದ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಕರ್ಣಪ್ರಯಾಗ ಘಟನೆಯಲ್ಲಿ ಏಕಪಕ್ಷೀಯ ಕ್ರಮದ ವಿರುದ್ಧ ಭಾನುವಾರ ನಡೆಯಲಿರುವ ತಮ್ಮ ಪ್ರತಿಭಟನೆಯನ್ನು ಬೆಂಬಲಿಸುವಂತೆ ಮನವಿ ಮಾಡಿದರು.



ವಿನಂತಿಯನ್ನು ಪೂರೈಸಲು ಸಾಧ್ಯವಾಗದಿದ್ದಾಗ, ನಿಹಾಂಗ್‌ಗಳು ಗದ್ದಲವನ್ನು ಸೃಷ್ಟಿಸಿದರು, ಮೂರನೇ ಮಹಡಿಗೆ ಧಾವಿಸಿದರು, ಅದರ ಪ್ರವೇಶದ್ವಾರವನ್ನು ತಡೆದರು, ಒಬ್ಬ ವ್ಯಕ್ತಿಯನ್ನು ಒತ್ತೆಯಾಳಾಗಿ ಇಟ್ಟುಕೊಂಡರು ಮತ್ತು ಪ್ರದೇಶದ ಮೇಲೆ ಹಿಡಿತ ಸಾಧಿಸಿದರು. ಎಸ್‌ಪಿ ತೋಮರ್ ಅವರು ಗುರುದ್ವಾರದಿಂದ ಪಂಜಾಬ್‌ಗೆ ಸುರಕ್ಷಿತವಾಗಿ ಹಿಂತಿರುಗುವ ಬಗ್ಗೆ ನಿಹಾಂಗ್‌ಗಳಿಗೆ ಭರವಸೆ ನೀಡಿದ್ದಾರೆ ಎಂದು ಬಿಯಾಂತ್ ಸಿಂಗ್ ಹೇಳಿದರು, ಆದರೆ ಬಿಕ್ಕಟ್ಟು ಮುಂದುವರೆದಿದೆ.

# ಶೀಘ್ರದಲ್ಲೇ ಸಂಪುಟ ವಿಸ್ತರಣೆ ಸಾಧ್ಯತೆ

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆಗೆ ಮತ್ತೆ ಒತ್ತಡಗಳು ಕೇಳಿ ಬರುತ್ತಿದ್ದು ರಾಜ್ಯ ನಾಯಕರು ಮೂರ್ನಾಲ್ಕು ದಿನಗಳಲ್ಲಿ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಸಂಪುಟ ವಿಸ್ತರಣೆ ಕುರಿತು ಚರ್ಚೆ ನಡೆಸಲಿದ್ದಾರೆ.ವಿಧಾನಪರಿಷತ್, ರಾಜ್ಯಸಭೆ ಚುನಾವಣೆ ಮುಗಿದಿದೆ. ಕೆಪಿಸಿಸಿಯ ನೂತನ ಅಧ್ಯಕ್ಷರು ಪದಪಗ್ರಹಣ ಮಾಡಿದ್ದಾರೆ. ರಾಜಕೀಯವಾಗಿ ಎಲ್ಲಾ ಪ್ರಮುಖ ಘಟನೆಗಳು ಮುಗಿದಿದ್ದು, ಇನ್ನೂ ಸಂಪುಟ ವಿಸ್ತರಣೆ ಮಾತ್ರ ಬಾಕಿಯಿದೆ.

ಆಗಸ್ಟ್ ತಿಂಗಳಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣಾ ನೆರವೇರಿಸಲು ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಿಸಬೇಕಿದೆ. ಅದಕ್ಕೂ ಮುನ್ನ ಸಂಪುಟದಲ್ಲಿ ಖಾಲಿ ಇರುವ 20 ಸ್ಥಾನಗಳನ್ನು ಭರ್ತಿ ಮಾಡಬೇಕು. ಜೊತೆಗೆ ವಿಧಾನಪರಿಷತ್ತಿನಲ್ಲಿ ಖಾಲಿಯಾಗಿರುವ 4 ಸ್ಥಾನಗಳಿಗೂ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕಿದೆ. ಈ ನಿಟ್ಟಿನಲ್ಲಿ ಹೈಕಮಾಂಡ್ ಜೊತೆ ಚರ್ಚೆ ನಡೆಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ತೆರಳುವ ಸಾಧ್ಯತೆ ಇದೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕೂಡ ದೆಹಲಿಗೆ ಭೇಟಿ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಇರುವ 20 ಸ್ಥಾನಗಳಿಗೆ ಕಾಂಗ್ರೆಸ್‌ನ 120 ಶಾಸಕರು ಸಚಿವ ಆಕಾಂಕ್ಷಿಗಳಾಗಿದ್ದು, ದಿನೇ ದಿನೇ ಒತ್ತಡಗಳು ಹೆಚ್ಚಾಗುತ್ತಿವೆ. ಹಿರಿಯ ಶಾಸಕರುಗಳು ತಮಗೆ ಅವಕಾಶ ನೀಡಬೇಕು ಎಂದು ಪಟ್ಟುಹಿಡಿದಿದ್ದರೆ, ಯುವ ಶಾಸಕರು ಸಂಪುಟದಲ್ಲಿ ತಮನ್ನೂ



ಪರಿಗಣಿಸುವಂತೆ ಒತ್ತಾಯಿಸಿದ್ದಾರೆ. ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವುದರಿಂದ ಸಾಮಾಜಿಕ ನ್ಯಾಯ ಹಾಗೂ ಪ್ರಾದೇಶಿಕ ಪ್ರಾತಿನಿಧ್ಯತೆ ನೀಡುವುದು ಅನಿವಾರ್ಯವಾಗಿದೆ. ಈ ನಡುವೆ ರಾಜ್ಯದಲ್ಲಿ ಶಕ್ತಿ ಕೇಂದ್ರಗಳು ಹೆಚ್ಚಾಗಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ ಬೆಂಬಲಿಗರಿಗೆ ಮಣೆ ಹಾಕಲು ನಿರ್ಧರಿಸಿದ್ದರೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಿಂಬಾಲಕರ ಪಟ್ಟಿ ಕೂಡ ದೊಡ್ಡದಿದೆ. ಎಲ್ಲವನ್ನೂ ಅಳೆದು ತೂಗಿ ಸಂಭಾಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮೊದಲು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ, ಸಂಪುಟ ಸೇರಲು ಹಲವಾರು ಮಂದಿ ಕಸರತ್ತು ನಡೆಸಿದ್ದರು. ಆದರೆ ಅದಕ್ಕೆ ಡಿ.ಕೆ.ಶಿವಕುಮಾರ್ ಅವಕಾಶ ನೀಡಲಿಲ್ಲ. ಅಧಿಕಾರ ಹಸ್ತಾಂತರವಾದ ಬಳಿಕ ಮೊದಲ ಹಂತದ ಸಂಪುಟ ವಿಸ್ತರಣೆಯಲ್ಲಿ ಹಿರಿಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಸಂಪೂರ್ಣವಾಗಿ ಹೊಸ ಮುಖಗಳಿಗೆ ಅದರಲ್ಲೂ 3ಕ್ಕಿಂತ ಹೆಚ್ಚು ಬಾರಿ ಗೆದ್ದಿರುವ ಶಾಸಕರಿಗೆ ಆದ್ಯತೆ ನೀಡಲು ಚರ್ಚೆಗಳು ನಡೆಯುತ್ತಿವೆ. ಇದೇ ತಿಂಗಳ 23 ಅಥವಾ 25ರಂದು ಸಂಪುಟ ವಿಸ್ತರಣೆಯಾಗಲಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿಕೊಳ್ಳುತ್ತಿದ್ದರು. ನಾಳೆ ಜೂನ್ 23 ದಿನವಾಗಿದ್ದು ಸಂಪುಟ ವಿಸ್ತರಣೆಯ ಲಕ್ಷಣಗಳಿಲ್ಲ. ಮೂಲಗಳ ಪ್ರಕಾರ ಜೂನ್ 25ಕ್ಕೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಹಾಗೂ ಬಿ.ಕೆ.ಹರಿಪ್ರಸಾದ್ ದೆಹಲಿಗೆ ತೆರಳಲಿದ್ದಾರೆ ಎಂದು ಹೇಳಲಾಗುತ್ತಿದೆ.

ದೆಹಲಿಯಲ್ಲಿ ವರಿಷ್ಠ ನಾಯಕರ ಜೊತೆ ಚರ್ಚೆಯ ವೇಳೆ ರಾಜ್ಯದ ಮೂರು ನಾಯಕರು ತಮ ಬೆಂಬಲಿಗರ ಪಟ್ಟಿಯನ್ನು ಹೈಕಮಾಂಡ್‌ಗೆ ತಲುಪಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ ದಿನಗಳಲ್ಲಿ ಅಧಿಕಾರ ಹಸ್ತಾಂತರ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗಳಂತಹ ಪ್ರಮುಖ ವಿದ್ಯಾನಾನಗಳನ್ನು ಯಾವುದೇ ವಿವಾದಗಳಾಗದಂತೆ ಸಮಚಿತ್ತವಾಗಿ ನಿಭಾಯಿಸುವಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಯಶಸ್ವಿಯಾಗಿದ್ದರು. ಅದಕ್ಕಾಗಿ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಅಭಿನಂದಿಸಿದರು. ಈ ಮೊದಲಿನ ಪರಿಸ್ಥಿತಿಗಳನ್ನು ನಿಭಾಯಿಸಿದಷ್ಟು ಸುಲಭವಾಗಿ ಸಂಪುಟ ವಿಸ್ತರಣೆಯನ್ನು ಸರಿದೂಗಿಸಲು ಕಷ್ಟಸಾಧ್ಯ ಎಂದು ಹೇಳಲಾಗುತ್ತಿದೆ. ರಾಜ್ಯದಲ್ಲಿ ಸಂಪುಟ ಸ್ಥಾನದ ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿದೆ. ಅವರನ್ನು ಸರಿದೂಗಿಸುವುದು ಅಂದುಕೊಂಡಷ್ಟು ಸುಲಭವಲ್ಲ. ಇದು ಕಾಂಗ್ರೆಸ್‌ನ ಪಾಲಿಗೆ ದೊಡ್ಡ ಸವಾಲು ಎಂದು ಭಾವಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರು ಸದ್ಯಕ್ಕೆ ಸಂಪುಟ ವಿಸ್ತರಣೆಯ ತಂಟೆಗೆ ಹೋಗದೇ ಸ್ವಲ್ಪ ದಿನ ಕಾಲ ಮುಂದೂಡುವ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಅದಕ್ಕೆ ಅವಕಾಶ ನೀಡದಂತೆ ಶೀಘ್ರದಲ್ಲೇ ಸಂಪುಟ ವಿಸ್ತರಣೆ ಮಾಡಬೇಕೆಂದು ಪಕ್ಷದ ಆಂತರಿಕ ವಲಯದಲ್ಲಿ ತೀವ್ರ ಒತ್ತಡ ಕೇಳಿ ಬರುತ್ತಿದೆ.

## ಮಾದಕ ವ್ಯಸನ ಮುಕ್ತ ಗದಗ ವಾಕಾಥಾನ್-2026 ಕಾರ್ಯಕ್ರಮ

# ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯ : ಐಜಿಪಿ ಸಂದೀಪ್ ಪಾಟೀಲ್

ಗದಗ: "ಮಾದಕ ವ್ಯಸನ ಮುಕ್ತ ಸಮಾಜವನ್ನು ನಿರ್ಮಿಸುವುದು ಕೇವಲ ಪೊಲೀಸ್ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ. ಸಾರ್ವಜನಿಕರು ಹಾಗೂ ಯುವಜನತೆ ಕೈಜೋಡಿಸಿದಾಗ ಮಾತ್ರ ಇದನ್ನು ಸಂಪೂರ್ಣವಾಗಿ ಮುಕ್ತಗೊಳಿಸಲು ಸಾಧ್ಯ," ಎಂದು ಬೆಳಗಾವಿ ಉತ್ತರ ವಲಯದ ಐಜಿಪಿ ಸಂದೀಪ್ ಪಾಟೀಲ್ ಅವರು ತಿಳಿಸಿದರು.








ನಗರದ ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ಮತ್ತು ಕಳ್ಳಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ, ಗದಗ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ "ಮಾದಕ ವ್ಯಸನ ಮುಕ್ತ ಗದಗ ವಾಕಥಾನ್ 2026" ಕಾರ್ಯಕ್ರಮ ಕುರಿತು ಆಟೋ ಮೂಲಕ ಜನ ಜಾಗೃತಿ ವಾಕಥ-ಾನ್ 2026 ಕಾರ್ಯಕ್ರಮಕ್ಕೆ ಗಾಂಧಿ ಸರ್ಕಲ್ ನಲ್ಲಿ ಸೋಮವಾರ ಜೂನ್ (22) ರಂದು ಹಮ್ಮಿಕೊಂಡಿದ್ದ ಮಾದಕ ವ್ಯಸನ ಮುಕ್ತ ಗದಗ ವಾಕಾಥಾನ್-2026 ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಐಜಿಪಿ ಸಂದೀಪ ಪಾಟೀಲ್ ಚಾಲನೆ ನೀಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, "ಪ್ರತಿಯೊಬ್ಬರ ಜೀವನದಲ್ಲೂ ಡಾಕ್ಟರ್, ಇಂಜಿನಿಯರ್, ಪೊಲೀಸ್ ಅಥವಾ ಕ್ರೀಡಾಪಟು ಆಗಬೇಕೆಂಬ ದೊಡ್ಡ ಕನಸುಗಳಿರುತ್ತವೆ. ಆದರೆ, ಒಮ್ಮೆ ಡ್ರಗ್ಸ್‌ನಂತಹ ದುಶ್ಚಟಗಳಿಗೆ ಬಲಿಯಾದರೆ ಆ ಎಲ್ಲಾ ಕನಸುಗಳು ನುಚ್ಚುನೂರಾಗುತ್ತವೆ. ಹೀಗಾಗಿ ಯುವಜನತೆ ಯಾವುದೇ ಕಾರಣಕ್ಕೂ ಇಂತಹ ವ್ಯಸನಗಳಿಗೆ ಒಳಗಾಗದೆ 'ಮಾದಕ ವಸ್ತುವಿಗೆ ಇಲ್ಲ ಎನ್ನಿ' (Say No to Drugs) ಎಂಬ ಪಣವನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು," ಎಂದರು

ಜೂನ್ 26 ರಂದು ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆಯನ್ನು ಆಚ-ರಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಇಲಾಖೆಯು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಾರ ಪೂರ್ತಿ ವಿಶೇಷ ಅಭಿಯಾನಗಳನ್ನು ಹಮ್ಮಿಕೊಂಡಿದೆ. "ಡ್ರಗ್ಸ್ ಕಾಯ್ದೆಯಡಿ ಕೇವಲ ಮಾರಾಟಗಾರರಷ್ಟೇ ಅಲ್ಲದೆ, ಮಾದಕ ವಸ್ತುಗಳನ್ನು ಸೇವಿಸುವ ಗ್ರಾಹಕರ (Consumers) ಮೇಲೂ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಯುವಕರು ಸ್ನೇಹಿತರ ಒತ್ತಡಕ್ಕೆ ಮಣಿದು ಇಂತಹ ಚಟಗಳಿಗೆ ದಾಸರಾಗಬಾರದು. ಸಮಾಜದಲ್ಲಿ ಡ್ರಗ್ಸ್ ಬೇಡಿಕೆ (Demand) ಕಡಿಮೆಯಾದಾಗ, ಅದರ ಮಾರಾಟವೂ ತಾನಾಗಿಯೇ ನಿಲ್ಲುತ್ತದೆ," ಎಂದು ಅವರು ಅಭಿಪ್ರಾಯಪಟ್ಟರು. ಕಳೆದ ಒಂದು ವರ್ಷದಲ್ಲಿ ಗದಗ ಜಿಲ್ಲಾ ಪೊಲೀಸರು ಮಾದಕ ವಸ್ತುಗಳ ತಡೆಗೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 27 ಪ್ರಕರಣಗಳನ್ನು ದಾಖಲಿಸಿ, 52 ಆರೋಪಿಗಳನ್ನು ಬಂಧಿಸಲಾಗಿದೆ. ಅಷ್ಟೇ ಅಲ್ಲದೆ, ಇಡೀ ಉತ್ತರ ವಲಯದ 5 ಜಿಲ್ಲೆಗಳಲ್ಲೇ (ಬೆಳಗಾವಿ, ವಿಜಯಪುರ, ಗದಗ, ಧಾರವಾಡ ಮತ್ತು ಬಾಗಲಕೋಟೆ) ಪ್ರಥ-ಮ ಬಾರಿಗೆ ಗದಗ ಜಿಲ್ಲೆಯಲ್ಲಿ 'ಪಿಟ್ ಎನ್‌ಡಿಪಿ-ಎಸ್' (PIT NDPS) ಕಾಯ್ದೆಯಡಿ ಅಭ್ಯಾಸ ಬಲ ಉಳ್ಳ ಅಪರಾಧಿಗಳ ವಿರುದ್ಧ ಪ್ರಕರಣ ದಾಖಲಿಸಿ, ಒಂದು ವರ್ಷದವರೆಗೆ ಜೈಲಿಗಟ್ಟುವ ಕಠಿಣ ಕ್ರಮ ಜರುಗಿಸಲಾಗಿದೆ ಎಂದು ಐಜಿಪಿ ಅವರು ಗದಗ ಜಿಲ್ಲಾ ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಶ್ಲಾಘಿ-ಸಿದರು. ಸಾರ್ವಜನಿಕರು ತಮ್ಮ ಸುತ್ತಮುತ್ತ ಎಲ್ಲಾದರೂ ಮಾದಕ ವಸ್ತುಗಳ ಮಾರಾಟ, ಸೇವನೆ ಅಥವಾ ಗಾಂಜಾ ಬೆಳೆಯುವಿಕೆ ಕಂಡುಬಂದಲ್ಲಿ ತಕ್ಷಣವೇ ಗದಗ ಜಿಲ್ಲಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಮಾಹಿತಿ ನೀಡುವವರ ವಿವರಗಳನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದ ಅವರು, "ನಶೆ ಮುಕ್ತ ಕರ್ನಾಟಕ" ನಿರ್ಮಾಣದ ಈ ಮಹತ್ಕಾರ್ಯದಲ್ಲಿ ಸಾರ್ವಜನಿಕರು ಮತ್ತು ಮಾಧ್ಯಮದವರು ಇಲಾಖೆಯೊಂದಿಗೆ ಕೈಜೋಡಿಸಬೇಕೆಂದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ ಮಾತನಾಡಿ ಮಾದಕ ವಸ್ತುಗಳ ದುರ್ಬಳಕೆಯು ಕೇವಲ ಒಬ್ಬ ವ್ಯಕ್ತಿಯ ಮೇಲಷ್ಟೇ ಅಲ್ಲದೆ, ಅವರ ಇಡೀ ಕುಟುಂಬ ಹಾಗೂ ಯುವ ಪೀಳಿಗೆಯ ಭವಿಷ್ಯದ ಮೇಲೆ ಅತ್ಯಂತ ಗಂಭೀರವಾದ ಪರಿಣಾಮ ಬೀರುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಮಾದಕ ವ್ಯಸನದ ವಿರುದ್ಧ ಧ್ವನಿ ಎತ್ತಬೇಕಾಗಿದೆ," ಎಂದು ತಿಳಿಸಿದರು. ಯಾವುದೇ ಒಂದು ವೈದ್ಯಕೀಯ ಔಷಧಿಯನ್ನೇ ಆಗಲಿ, ಅದನ್ನು ನಿಗದಿತ ಪ್ರಮಾಣಕ್ಕಿಂತ ಅತಿಯಾಗಿ ಬಳಕೆ ಮಾಡಿದರೆ ಅದು ಔಷಧಿಯಾಗುಳಿಯದೆ ವಿಷವಾಗಿ ಮಾರ್ಪಡುತ್ತದೆ ಎಂಬುದು ನಮಗೆಲ್ಲ ತಿಳಿದಿರುವ ಸತ್ಯ," ಎಂದು ಎಸ್ಪಿ ರೋಹನ್ ಜಗದೀಶ್ ಅವರು ನೆನಪಿಸಿದರು. "ಅದೇ ರೀತಿ ಇತ್ತೀಚಿನ ದಿನಗಳಲ್ಲಿ ಯುವಜನತೆ ಗಾಂಜಾ, ಹಶೀಶ್, ಆಯಿಲ್, ಒಪಿಯಾಡ್ಸ್ ಹಾಗೂ ವಿವಿಧ ಕೆಮಿಕಲ್ ಡ್ರಗ್ಸ್‌ಗಳಂತಹ ಮಾದಕ ವ್ಯಸನಗಳಿಗೆ ತುತ್ತಾಗುತ್ತಿದ್ದಾರೆ. ಇವು ನೇರವಾಗಿ ಅಥವಾ ಪರೋಕ್ಷವಾಗಿ ಮನುಷ್ಯನ ಆರೋಗ್ಯ, ಭವಿಷ್ಯ, ಕುಟುಂಬ ಹಾಗೂ ಆರ್ಥಿಕ ಸ್ಥಿತಿಯನ್ನು ಸಂಪೂರ್ಣವಾಗಿ ಹಾನಿ ಮಾಡಿ ಸಾವು-ನೋವಿಗೆ ದೂಡುತ್ತವೆ," ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಯುವಕರಲ್ಲಿ ಕಾಡುವ 'ಸ್ನೇಹಿತರ ಒತ್ತಡ'ದ (Peer Pressure) ಕುರಿತು ಎಚ್ಚರಿಸಿದ ಎಸ್ಪಿಯವರು, "ಸ್ನೇಹಿತರು ಕೇವಲ 'ಒಂದೇ ಒಂದು ಬಾರಿ ಪ್ರಯತ್ನಿಸಿ ನೋಡು, ಒಮ್ಮೆ ಟ್ರೈ ಮಾಡು' ಎಂದು ಹೇಳುವ ಮಾತಿಗೆ ಮರುಳಾಗಿ ಯಾರೂ ಈ ಒತ್ತಡಕ್ಕೆ ಒಳಗಾಗಬಾರದು. ಏಕೆಂದರೆ, ಕೇವಲ ಒಂದು ಬಾರಿಯ ಬಳಕೆಯೂ ಸಹ ನಿಮ್ಮನ್ನು ಆ ವ್ಯಸನಕ್ಕೆ ದಾಸರನ್ನಾಗಿ (Addicted) ಮಾಡಬಹುದು. ಈ ಚಟ ಮುಂದುವರಿದಲ್ಲಿ ನಿಮ್ಮ ಹಾಗೂ ನಿಮ್ಮ ಇಡೀ ಕುಟುಂಬದ ನೆಮ್ಮದಿ ನಾಶವಾಗುತ್ತದೆ," ಎಂದು ವಿದ್ಯಾರ್ಥಿಗಳಿಗೆ ಕಟು ಸತ್ಯವನ್ನು ಮನವ-ರಿಕೆ ಮಾಡಿಸಿದರು. ಮಾದಕ ವಸ್ತುಗಳ ವಿರುದ್ಧದ ಹೋರಾಟದಲ್ಲಿ ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯು ಸದಾ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದ ರೋಹನ್ ಜಗದೀಶ್ ಅವರು, "ಕಳೆದ ಒಂದು ವರ್ಷದಿಂದ ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟಗಾರರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಿ ಸಾಕಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ. ಅಷ್ಟೇ ಅಲ್ಲದೆ, ಪ್ರಥಮ ಬಾರಿಗೆ ಗದಗ ಜಿಲ್ಲೆಯಲ್ಲಿ 'ಪಿಟ್ ಎನ್‌ಡಿಪಿಎಸ್' (PIT NDPS) ಕಾಯ್ದೆಯಡಿ ಕುಖ್ಯಾತ ಪೆಡ್ಲರ್ ಒಬ್ಬನ ವಿರುದ್ಧ ಪ್ರಕರಣ ದಾಖಲಿಸಿ, ಅತ್ಯಂತ ಕಠಿಣ ಶಿಕ್ಷೆ ವಿಧಿಸಿ ಆತನನ್ನು ಜೈಲಿಗಟ್ಟಲಾಗಿದೆ," ಎಂದು ಇಲಾಖೆಯ ದೃಢ ನಿರ್ಧಾರವನ್ನು ಪ್ರಶಂಸಿದರು. ಸಮಾಜದಲ್ಲಿ ಮಾದಕ ವಸ್ತುಗಳ ಸಂಪೂರ್ಣ ನಿರ್ಮೂಲನೆಗೆ ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದ್ದು, ಮುಂಬರುವ ದಿನಗಳಲ್ಲಿ ಗದಗ ಜಿಲ್ಲೆಯನ್ನು ಸಂಪೂರ್ಣ ನಶೆ ಮುಕ್ತವನ್ನಾಗಿಸಲು ಎಲ್ಲರ ಸಹಕಾರ ಕೋರಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸಿದರು. ಅಪರ ಜಿಲ್ಲಾಧಿಕಾರಿಗಳಾದ ಡಾ. ದುರಗೇಶ್ ಕೆ.ಆರ್ ಮಾತನಾಡಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ವತಿಯಿಂದ ಮಾದಕ ವಸ್ತುಗಳ ತಡೆಗೆ ಜಿಲ್ಲಾ ಮಟ್ಟದಲ್ಲಿ ಹಲವಾರು ಕಾರ್ಯಪಡೆಗಳನ್ನು (ಖಿಛಿಇಜಿಿಂಡಿಛಿಜ) ರಚಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದ-ರೆ, ಕೇವಲ ಕಾನೂನು ಕ್ರಮಗಳಿಂದ ಮಾತ್ರ ಇದನ್ನು ತಡೆಯಲು ಸಾಧ್ಯವಿಲ್ಲ. ಸಮಾಜದಲ್ಲಿ ಇದರ ವಿರುದ್ಧ ವ್ಯಾಪಕ ಜನಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ," ಎಂದು ತಿಳಿಸಿದರು. ಸಾಮಾಜಿಕ ಕಳಕಳಿಯೊಂದಿಗೆ ನಿರಂತರವಾಗಿ ಇಂತಹ ಉಪಯುಕ್ತ ಜಾಗೃತಿ ಅಭಿಯಾನಗಳನ್ನು ಆಯೋಜಿಸುತ್ತಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು (SP) ಶ್ಲಾಘಿಸಿದ ಅವರು, ಅಭಿಯಾನದ ಯಶಸ್ಸಿಗೆ ಕೈಜೋಡಿಸಿರುವ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಕ್ರೀಡಾ ಇಲಾಖೆ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ (NGO) ಕಾಳಜಿಯನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾದಕ ವ್ಯಸನದ ವಿರುದ್ಧ ನಡೆದ ಐತಿಹಾಸಿಕ ಹೋರಾಟಗಳನ್ನು ಸ್ಮರಿಸಿದ ಅಪರ ಜಿಲ್ಲಾಧಿಕಾರಿಗಳು, "ಹಿಂದೆ ಇಳಕಲ್‌ನ ಪೂಜ್ಯ ಮಹಾಂತ ಸ್ವಾಮಿಗಳವರು ಧೂಮಪಾನ, ಮದ್ಯಪಾನ ಹಾಗೂ ಮಾದಕ ವಸ್ತುಗಳ ವಿರುದ್ಧ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಿದ್ದರು. 'ನಿಮ್ಮಲ್ಲಿರುವ ಕುಡಿತದ ಚಟ ಹಾಗೂ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ' ಎಂದು ಕೇಳುವ ಮೂಲಕ ಇಡೀ ಸಮಾಜದಲ್ಲಿ ದೊಡ್ಡ ಪರಿವರ್ತನೆ ತಂದಿದ್ದರು. ಪ್ರಸ್ತುತ ರಾಜ್ಯ ಸರ್ಕಾರವು ಸಹ ಅಂತಹದ್ದೇ ಕಳಕಳಿಯೊಂದಿಗೆ ಸಮಾಜ ಮುಖಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ," ಎಂದರು.

ಇತ್ತೀಚಿನ ದಿನಗಳಲ್ಲಿ ಯುವಜನತೆ ಕೇವಲ ಸಾಂಪ್ರದಾಯಿಕ ಮಾದಕ ವಸ್ತುಗಳಷ್ಟೇ ಅಲ್ಲದೆ, ಅಪಾಯಕಾರಿ 'ಮೆಡಿಕಲ್ ಡ್ರಗ್ಸ್' ಹಾಗೂ ಕೆಮ್ಮಿನ ಸಿರಪ್‌ಗಳ (Cough Syrups) ದುರ್ಬಳಕೆಗೆ ಅತಿಯಾಗಿ ದಾಸರಾಗುತ್ತಿರುವುದರ ಕುರಿತು ಡಾ. ದುರಗೇಶ್ ಅವರು ತೀವ್ರ ಕಳಕಳಿ ವ್ಯಕ್ತಪಡಿಸಿದರು. "ಕೇವಲ ನಶೆಗಾಗಿ ಮತ್ತು ಅತಿಯಾಗಿ ನಿದ್ರೆ ಮಾಡಲು ಇಂತಹ ಸಿರಪ್‌ಗಳನ್ನು ಯುವಕರು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಇಂತಹ ನಿಷೇಧಿತ ಹಾಗೂ ದುರ್ಬಳಕೆಯಾಗುವ ಔಷಧಗಳ ಮಾರಾಟದ ಮೇಲೆ ಕಟ್ಟುನಿಟ್ಟಿನ ನಿಗಾವಹಿಸಲು ಈಗಾಗಲೇ ಜಿಮ್ಸ್ (GIMS) ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಸರ್ಕಾರದ ನಿರ್ದೇಶನದಂತೆ ಕಡಕ ಸೂಚನೆ ನೀಡಲಾಗಿದೆ," ಎಂದು ಸ್ಪಷ್ಟಪಡಿಸಿದರು. "ಒಂದು ಮನೆಯಲ್ಲಿ ಕೇವಲ ಒಬ್ಬ ವ್ಯಕ್ತಿ ಮಾದಕ ವ್ಯಸನಿಯಾದರೂ, ಅದು ಇಡೀ ಕುಟುಂಬ ಹಾಗೂ ಸುತ್ತಮುತ್ತಲಿನ ವಾತಾವರಣದ ನೆಮ್ಮದಿಯನ್ನು ಕದಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಹಾಗೂ ಯುವಜನತೆ ಕೇವಲ ಈ ವಾಕಥಾನ್‌ನಲ್ಲಿ ಭಾಗವಹಿಸುವುದಷ್ಟೇ ಅಲ್ಲದೆ, ತಮ್ಮ ತಮ್ಮ ಗ್ರಾಮ ಹಾಗೂ ಮನೆಗಳಲ್ಲಿ ಯಾರಾದರೂ ವ್ಯಸನಿಗಳಿದ್ದರೆ ಅವರಿಗೆ ತಿಳಿಹೇಳಿ ಜಾಗೃತಿ ಮೂಡಿಸಬೇಕು. ಮಾದಕ ವ್ಯಸನದಿಂದ ಮುಕ್ತಿ ಹೊಂದಲು ಯೋಗ, ಪ್ರಾಣಾಯಾಮ ಧ್ಯಾನ ಮುಂತಾದ ಉತ್ತಮ ಹವ್ಯಾಸಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು," ಎಂದು ಕರೆ ನೀಡಿದರು.

ಬೆಳಗಾವಿ ಉತ್ತರ ವಲಯದ ಐಜಿಪಿ ಸಂದೀಪ್ ಪಾಟೀಲ್ ಅವರ ದಕ್ಷ ನಾಯಕತ್ವ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ಅಪರ ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆಯನ್ನು ರಾಜ್ಯದಲ್ಲೇ ಮಾದರಿ 'ವ್ಯಸನ ಮುಕ್ತ ಜಿಲ್ಲೆ'ಯನ್ನಾಗಿ ಮಾಡಲು ಪ್ರತಿಯೊಬ್ಬ ನಾಗ-ರಿಕರು ಕೈಜೋಡಿಸಬೇಕೆಂದು ವಿನಂತಿಸಿದರು. ಐಎಂಎ (IMA) ಹಿರಿಯ ಅಧ್ಯಕ್ಷರಾದ ಡಾ. ಪ್ಯಾರಲಾಲ್ ಮುಲಾನಿ ಮಾತನಾಡಿ ಮಾದಕ ವ್ಯಸನ ಎಂಬುದು ಯುವಜನತೆಯ ಇಡೀ ಜೀವನ ಹಾಗೂ ವೃತ್ತಿ ಬದುಕನ್ನು ನಾಶಪಡಿಸುತ್ತದೆ. ಇಂತಹ ವ್ಯಸನಗಳಿಂದ ಯುವ ಪೀಳಿಗೆಯನ್ನು ರಕ್ಷಿಸಲು ದೈಹಿಕ ಮತ್ತು ಮಾನಸಿಕ ಚಿಕಿತ್ಸೆಗಳ ಜೊತೆಗೆ ಆಪ್ತಸಮಾಲೋಚನೆ (Coun-seling) ನಡೆಸುವುದು ಅತ್ಯಂತ ಪ್ರಮುಖವಾಗಿದೆ," ಎಂದು ಅಭಿಪ್ರಾಯಪಟ್ಟರು. ಯುವಜನತೆ ಒಮ್ಮೆ ರಾಸಾಯನಿಕ (Chemical dependen-cy) ಅಥವಾ ದೈಹಿಕವಾಗಿ ಮಾದಕ ವಸ್ತುಗಳಿಗೆ ದಾಸರಾದಾಗ, ಅದರಿಂದ ಹೊರಬರಲು ಕೇವಲ ಔಷಧಗಳಷ್ಟೇ ಸಾಲದು. ಯೋಗ, ಮನೋವೈದ್ಯಕೀಯ ಚಿಕಿತ್ಸೆ (Psychiatry), ಸೈಕೋಥೆರಪಿ ಹಾಗೂ ಸೂಕ್ತ ಕೌನ್ಸೆಲಿಂಗ್ ಸೆಷನ್‌ಗಳನ್ನು ಒಳಗೊಂಡ ಸಮಗ್ರ ಚಿಕಿತ್ಸಾ ವಿಧಾನದ ಅಗತ್ಯವಿರುತ್ತದೆ," ಎಂದು ಡಾ. ಮುಲಾನಿ ಅವರು ವಿವರಿಸಿದರು. ಈ ನಿಟ್ಟಿನಲ್ಲಿ ಇಲಾಖೆಯು ರೂಪಿಸಿರುವ ಪ್ರಸ್ತಾವನೆಗಳು ಹಾಗೂ ಕೈಗೊಂಡಿರುವ ಕ್ರಮಗಳು ಯುವಕರನ್ನು ವ್ಯಸನಮುಕ್ತರನ್ನಾಗಿಸಲು ಉತ್ತಮ ಫಲಿತಾಂಶ ನೀಡಲಿವೆ ಎಂದು ಅವರು ಆಶಿಸಿದರು. ಬಹುಶಃ ಇಂತಹ ವಿಶಿಷ್ಟವಾದ ಕೌನ್ಸೆಲಿಂಗ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿರುವ ಮೊದಲ ಜಿಲ್ಲೆ ಗದಗ ಇರಬಹುದು ಎಂದು ಅವರು ಶ್ಲಾಘಿಸಿದರು. "ಡ್ರಗ್ಸ್, ತಂಬಾಕು, ಗುಟ್ಕಾ ಹಾಗೂ ಮದ್ಯಪಾನದಂತಹ ಕೆಟ್ಟ ಚಟಗಳಿಂದ ಮುಕ್ತಿ ಹೊಂದುವುದರ ಜೊತೆಗೆ (De-addiction), ಯುವಕರು ತಮ್ಮ ಜೀವನದಲ್ಲಿ ಕೆಲವು ಉತ್ತಮ ಹವ್ಯಾಸಗಳಿಗೆ ದಾಸರಾಗಬೇಕು (Good Addiction)," ಎಂದು ಅವರು ಕರೆ ನೀಡಿದರು. "ಪುಸ್ತಕ ಓದುವುದು, ಸಾಮಾಜಿ-ಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಹಾಗೂ ದೈಹಿಕ ಚಟುವಟಿಕೆಗಳಲ್ಲಿ (Physical Activi-ties) ಸಕ್ರಿಯವಾಗಿ ಪಾಲ್ಗೊಳ್ಳುವುದನ್ನು ಯುವಕರು ರೂಢಿಸಿಕೊಳ್ಳಬೇಕು. ಇವು ನಿಮ್ಮನ್ನು ಧನಾತ್ಮಕವಾಗಿ ಸದೃಢರನ್ನಾಗಿ ಮಾಡುತ್ತವೆ," ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರೂ ಮುಂಜಾನೆಯ ತಂಪಾದ ವಾತಾವರಣದಲ್ಲಿ ಉತ್ಸಾಹದಿಂದ ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದನ್ನು ಸ್ಮ-ರಿಸಿದ ಅವರು, "ಚುರುಕಾದ ನಡಿಗೆಯು (Brisk Walking) ನಮ್ಮ ದೇಹದ ಒತ್ತಡವನ್ನು ನಿವಾ-ರಿಸುವ ಅತ್ಯುತ್ತಮ ಸಾಧನವಾಗಿದೆ," ಎಂದರು. ಇದು ಹೃದಯದ ಕಾರ್ಯಕ್ಷಮತೆಯನ್ನು (Cardiac performance) ಹೆಚ್ಚಿಸುತ್ತದೆ. ಕಾರ್ಯಕ್ರಮದಲ್ಲಿ ನೆರೆದಿರುವ ಯುವ ಹಾಗೂ ಆರೋಗ್ಯವಂತ ಸಮಾಜವು ಸದಾ ಇದೇ ರೀತಿ ಸದೃಢವಾಗಿ ಮುಂದುವರಿಯಲಿ ಎಂದು ಅವರು ಹಾರೈಸಿದರು.

ಈ ವಾಕಥಾನ್ ದಲ್ಲಿ ಡಿವೈಎಸ್.ಪಿ ಮಹಾಂತೇಶ್ ಸಜ್ಜನ, ಡಿ.ಎಸ್.ಪಿ ಮುರ್ತುಜಾ ಖಾದ್ರಿ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಮ್ಸ್ ನರ್ಸಿಂಗ್ ಕಾಲೇಜ್, ಲಯನ್ಸ್ ಕ್ಲಬ್, ಎಎಸ್‌ಎಸ್ ಕಾಲೇಜ್, ಸಂಕಲ್ಪ ನರ್ಸಿಂಗ್ ಕಾಲೇಜ್, ಕೆಎಲ್‌ಇ ಪ್ಯಾರಾಮೆಡಿಕಲ್ ಕಾಲೇಜ್, ಬಸವೇಶ್ವರ ಪ್ಯಾರಾಮೆಡಿಕಲ್ ಕಾಲೇಜ್, ಸಿಎಸ್‌ಐ ನರ್ಸಿಂಗ್ ಕಾಲೇಜ್ ಬೆಟಗೇರಿ, ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜ್, ಸರ್ಕಾರಿ ಪದವಿಪೂರ್ವ ಕಾಲೇಜುಗಳು, ಐಎಂಎ ಗದಗ, ವರ್ತಕರ ಸಂಘ ಗದಗ-ಬೆಟಗೇರಿ, ಇನ್ನರ್‌ವ್ಹೀಲ್ ಕ್ಲಬ್, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಔಷಧಿ ವ್ಯಾಪಾರಿಗಳ ವರ್ತಕರ ಸಂಘ, ಜೈನ್ ಗ್ರೂಪ್ಸ್ ಆಫ್ ಸಖಿ ಸಹೇಲಿ, ರೆಡ್‌ಕ್ರಾಸ್ ಸಂಸ್ಥೆ, ಆರ್.ಡಿ.ಪಿ.ಆರ್ ವಿಶ್ವವಿದ್ಯಾಲಯ, ಸಿಎಸ್‌ಐ ಆಸ್ಪತ್ರೆ ಹಾಗೂ ಜೆಟಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಪದಾಧಿಕಾರಿಗಳು ಹಾಜರಿದ್ದರು.

ಈ ವಾಕಥಾನ್ ವು ಗಾಂಧಿ ಸರ್ಕಲ್ ದಿಂದ ಪ್ರಾರಂಭವಾಗಿ ರೋಟರಿ ಸರ್ಕಲ್ ಮಾರ್ಗವಾಗಿ ಭೂಮರೆಡ್ಡಿ ಸರ್ಕಲ್, ಹಳೆ ಡಿಸಿ ಆಫೀಸ್, ಬಸವೇಶ್ವರ ಮೂರ್ತಿ ಭೀಷ್ಮಕೆರೆ ವರೆಗೆ ಬಂದು ತಲುಪಿತು. ಮಾದಕ ವ್ಯಸನ ಮುಕ್ತ ಗದಗ ವಾಕಾಥಾನ್-2026 ಕುರಿತು ಜಾಗೃತಿ ಮೂಡಿಸಿದ ಈ ವಾಕಥಾನ್ ನಗರದ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿತು. ವಾಕಥಾನ್ ದಲ್ಲಿ ಪಾಲ್ಗೊಂಡಿದ್ದ ಗದಗ ಜಿಲ್ಲೆಯ ಸಾರ್ವಜನಿಕರೇ, ಕ್ರೀಡಾ ಪಟುಗಳೆ, ವಿದ್ಯಾರ್ಥಿಗಳೆ ಎಲ್ಲಾ ಇಲಾಖೆಯ ನೌಕರರೇ ಕಾರ್ಯಕ್ರಮದಲ್ಲಿ ಭಾಗವಹಿಸಿ ಗದಗ ಜಿಲ್ಲೆಯನ್ನು ಮಾದಕ ವ್ಯಸನ ಮುಕ್ತಗೊಳಿಸೋಣ... ಮಾದಕ ವ್ಯಸನ ಜೀವನ ಮಸಣ, ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ನಮ್ಮೆಲರ ಜವಾಬ್ದಾರಿ, ಕಾನೂನು ಪಾಲಿಸಿ ಸುರಕ್ಷಿತ ಜೀವನ ಸಾಗಿಸಿ, ಮಾದಕ ವ್ಯಸನ ಮುಕ್ತ ಅಭಿಯಾನಕ್ಕೆ ಜಯವಾಗಲಿ,ಮಾದಕ ವ್ಯಸನೀಯ ಬದುಕು ಕಗ್ಗತ್ತಲಿನ ಬದುಕು, ನಮ್ಮೆಲ್ಲರ ನಡೆ ಮಾದಕ ವ್ಯಸನ ಮುಕ್ತದ ಕಡೆ" ಎಂಬ ಘೋಷವಾಕ್ಯದೊಂದಿಗೆ ಸಾಗಿದ ಜಾಥಾ ಸಾರ್ವಜನಿಕರ ಗಮನ ಸೆಳೆಯಿತು. ವಿದ್ಯಾರ್ಥಿಗಳು ಘೋಷಣಾ ಫಲಕಗಳನ್ನ ಹಿಡಿದು ಮಾದಕ ವ್ಯಸನ ಮುಕ್ತ ಗದಗ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

# ಆತ್ಮವಿಶ್ವಾಸ ಹೊಂದಲು ಸ್ವಯಂತರ ಬೇತಿ

ನಾವು ನೋಡುವ ಕೆಲವು ಜನರು ಅತ್ಯಂತ ಆತ್ಮವಿಶ್ವಾಸದಿಂದ ವರ್ತಿಸುತ್ತಾರೆ. ಅವರ ನಡೆ ನುಡಿ, ಉಡುಗೆ ತೊಡುಗೆಗಳು, ಮಾತು, ಸಂವಹನ ಕೌಶಲ್ಯ ಹಾಗೂ ಸೂಕ್ಷ್ಮತನಗಳು ಅವರಲ್ಲಿರುವ ಆತ್ಮವಿಶ್ವಾಸವನ್ನು ಎತ್ತಿ ತೋರುತ್ತವೆ. ಅಂತಹವರನ್ನು ನೋಡಿದಾಗ ಉಳಿದವರು ನಮಗೇಕೆ ಈ ರೀತಿಯ ಆತ್ಮ ವಿಶ್ವಾಸ ಇಲ್ಲ ಎಂದು ಬೇಸರ ಪಟ್ಟುಕೊಳ್ಳುತ್ತಾರೆ... ಮತ್ತೆ ಕೆಲವರು ಅಂತಹ ಆತ್ಮವಿಶ್ವಾಸ ತಮಗೂ ಇದ್ದರೆ ಅದೆಷ್ಟು ಚೆನ್ನ! ಎಂದು ಬಯಸುವುದು ಕೂಡ ಉಂಟು ಊಟ ಮಾಡಿದ್ದ ತಕ್ಷಣ ತಟ್ಟೆಯನ್ನು ಎತ್ತಿಕೊಂಡು ಒಯ್ದು ಅಡುಗೆ ಮನೆಯಲ್ಲಿ ಇಟ್ಟು ಬರುವುದಿಲ್ಲ ಆಕೆ... ಊಟ ಮಾಡುತ್ತಾ ತಾನು ಓದುತ್ತಿದ್ದ ಪೇಪರ್ ಅನ್ನು ಸಂಪೂರ್ಣವಾಗಿ ಓದಿ ಮುಗಿಸುವವರೆಗೆ ಆಕೆ ಎದ್ದು ಬರುವುದಿಲ್ಲ. ಇದನ್ನು ನಮ್ಮ ಮೆದುಳಿನಲ್ಲಿರುವ ಕೋಶಗಳು ಅರ್ಥ ಮಾಡಿಕೊಳ್ಳುತ್ತವೆ. ಇನ್ನು ಮುಂದೆಯೂ ಆಕೆ ಹಾಗೆಯೇ ಅದನ್ನು ನಿರ್ವಹಿಸಲು ಅನುವಾಗುವಂತೆ ತಮ್ಮನ್ನು ತಾವು ರೂಪಿಸಿಕೊಳ್ಳುತ್ತವೆ. ಇದು ಮೆದುಳಿನ ನೆನಪಿನ ಕೋಶಗಳು ನಮ್ಮನ್ನು ಅರಿತುಕೊಳ್ಳುವ ರೀತಿ. ನಮಗೆ ಬೇಕಿರಲಿ ಇಲ್ಲವೇ ಬೇಡವಾಗಿರಲಿ ಆದರೂ ಕೂಡ ನಾವು ಊಟವಾದ ತಕ್ಷಣ ಎದ್ದು ಹೋಗಿ ತಟ್ಟೆಯನ್ನು ಸಿಂಕ್ ನಲ್ಲಿ ಹಾಕಿ ಬಂದರೆ ನಮ್ಮ ಮೆದುಳಿನ ನರ ಕೋಶಗಳು ಅದನ್ನು ಗ್ರಹಿಸುತ್ತದೆ.

ನಿಜ ಹೇಳಬೇಕೆಂದರೆ ನಮ್ಮ ದೇಹ ಮತ್ತು ಬುದ್ಧಿಗಳಲ್ಲಿ ಆ ರೀತಿಯ ಒಂದು ವಿಶ್ವಾಸದ ಸೆಳಕು ಇದ್ದೇ ಇರುತ್ತದೆ. ಆದರೆ ನಮಗೆ ಅರಿವಿಲ್ಲವೇ ಅದರ ತಂತು ಕಡಿದು ಹೋಗಿರುತ್ತದೆ. ಆ ತಂತನ್ನು ಮತ್ತೆ ಮರುಜೋಡಿಸುವ ಮೂಲಕ ನಾವು ನಮ್ಮ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಆತ್ಮವಿಶ್ವಾಸದ ಮರುಪೂರಣವನ್ನು ಮಾಡಿಕೊಳ್ಳಬೇಕು.



ಅತ್ಯಂತ ಚಿಕ್ಕ ಪುಟ್ಟ ನಡೆಗಳ ಮೂಲಕ ನಾವು ನಮ್ಮ ಮೆದುಳಿಗೆ ಈ ಕುರಿತು ತರಬೇತಿ ನೀಡಬೇಕು. ಆ ನಡೆಗಳು ನಮ್ಮನ್ನು ರೂಪಿಸುತ್ತದೆ.

*ದಾಟಲಾರದಂತಹ ಇತಿ ಮಿತಿಗಳನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ನಮ್ಮ ಮೆದುಳಿನ ಮುಂಭಾಗದಲ್ಲಿರುವ ಕಾರ್ಟೆಕ್ಸ್ ಗಳು ಈ ರೀತಿಯಾಗಿ ಮಿತಿಗಳನ್ನು ಸರಿಯಾಗಿ ನಿರ್ವಹಿಸಲು ತಯಾರಾಗುತ್ತವೆ. ಈ ರೀತಿ ಮಾಡುವುದರಿಂದ ಶೇಕಡ 35 ರಷ್ಟು ಒತ್ತಡದ ಹಾರ್ಮೋನುಗಳನ್ನು ದಮನಿಸಬಹುದು ಪ್ರತಿ ದಿನ ಕನಿಷ್ಠ ಎರಡು ಗಂಟೆಗಳ ಕಾಲ ಒಂದೇ ಕೆಲಸದಲ್ಲಿ ಆಳವಾಗಿ ತೊಡಗಿಕೊಳ್ಳಬೇಕು.

* ಅತ್ಯಂತ ಸ್ಪಷ್ಟವಾದ ಹಾಗೂ ಅಧಿಕಾರಯುತವಾದ ಧ್ವನಿಯಲ್ಲಿ ಮಾತನಾಡಬೇಕು. ನಮ್ಮ ಧ್ವನಿಯಲ್ಲಿನ ಅಧಿಕಾರದ ಭಾವ ಕೇಳುಗರ ನರವ್ಯೂಹದ ಕೋಶದ ಲ್ಲಿ ನಂಬಿಕೆಯನ್ನು ಉಂಟು ಮಾಡುತ್ತದೆ. ಆತ್ಮವಿಶ್ವಾಸವು ನಮ್ಮಲ್ಲಿ ಇರಬಹುದೇ? ಹೌದೇ ? ನೋಡುತ್ತೇನೆ ? ಎಂಬ ಭಾವ ಇರಕೂಡದು.

*ನಮ್ಮ ಮೆದುಳು ಗುಣಮಟ್ಟ ಹಾಗೂ ಅದರ ಇರವನ್ನು ಕುರಿತು ತನ್ನದೇ ಆದ ಒಂದು ಗ್ರಹಿಕೆಯನ್ನು ಹೊಂದಿರುತ್ತದೆ... ಆದ್ದರಿಂದ ನೀವು ನಿಮ್ಮ ಕುರಿತು ಏನನ್ನೇ ಯೋಚಿಸಿದರು ಅದಕ್ಕೆ ಶೇಕಡ 20ರಷ್ಟು ಹೆಚ್ಚು ನಿಮ್ಮದಾಗಿ ಯೋಚಿಸಿ.

*ನಿಮಗೆ ನೀವೇ ಕೆಲವು ಪ್ರಮಾಣಗಳನ್ನು ಮಾಡಿಕೊಂಡು ಅವುಗಳನ್ನು ನಿಭಾಯಿಸಿ. ನಿಮ್ಮ ಮೇಲೆ ನಿಮಗೆ ನಂಬಿಕೆ ಬೆಳೆಯಲು ಡೋಪ ಮೈನ್ ಎಂಬ ಹಾರ್ಮೋನ್ ಕಾರ್ಯ ನಿರ್ವಹಿಸುತ್ತದೆ... ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನಿಮ್ಮ ಕ್ಷಮತೆಯನ್ನು ಹೆಚ್ಚಿಸಬೇಕು. ನಿಮಗೆ ನೀವೇ ಬದ್ಧರಾಗಿ ನಿಮ್ಮ ಬಲವನ್ನು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು. ಇದು ನಿಮ್ಮ ಆತ್ಮ ಆತ್ಮ ಬಲವನ್ನು ಹೆಚ್ಚಿಸುತ್ತದೆ. ಪ್ರತಿದಿನ ನಿಮ್ಮ ಮೂರು ಅತ್ಯಂತ ಆಪ್ತವಾದ ಚಟುವಟಿಕೆಗಳಿಗೆ ಸಮಯವನ್ನು ಮೀಸಲಿಡಿ.

*ಇತರರ ಬೆಳವಣಿಗೆಯನ್ನು ಸಂತೋಷದಿಂದ ಸ್ವೀಕರಿಸಿ. ಉತ್ತಮವಾದ ಸಮೃದ್ಧಿಯ ಮನಸ್ಥಿತಿಯು ನಮ್ಮ ಮೆದುಳಿನ ಕೋಶಗಳನ್ನು ಬೆಳವಣಿಗೆಯ ನಿಟ್ಟಿನಲ್ಲಿ ಕಾರ್ಯ ಶೀಲವಾಗುವಂತೆ ಆಕರ್ಷಿಸುತ್ತದೆ.

ಧನಾತ್ಮಕವಾದ ಗುರುತಿಸಿಕೊಳ್ಳುವಿಕೆ ಸಾಮಾಜಿ-ಕ ಬಂಧಗಳನ್ನು ಹೆಚ್ಚಿಸುತ್ತದೆ.. ಆದ್ದರಿಂದ ಪ್ರತಿದಿನ ನಿಮಗೆ ನೀವು ಕನಿಷ್ಠ ಮೂರು ವಿಷಯಗಳನ್ನು ಸಾಧಿಸಲೇಬೇಕು.

* ನಾಟಕೀಯವಾದಂತಹ ವಸ್ತು, ವಿಷಯ ಹಾಗೂ ಸನ್ನಿವೇಶಗಳಿಂದ ಸದಾ ದೂರವಾಗಿರಿ. ಅಂತಹ ಸನ್ನಿವೇಶಗಳು ನಿಮ್ಮಲ್ಲಿ ಒತ್ತಡವನ್ನು ಉಂಟು ಮಾಡುತ್ತವೆ... ಪರಿಣಾಮವಾಗಿ ನಿಮ್ಮ ನಿರ್ಣಯಾತ್ಮಕ ಭಾವ ಕುಸಿಯುತ್ತದೆ. ನಿಮ್ಮ ಭಾವನೆಗಳನ್ನು ನೀವು ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮತ್ತು ಅದನ್ನು ದೀರ್ಘಕಾಲ ರೂಢಿಸಿಕೊಳ್ಳುವ ಮೂಲಕ ಮಾನಸಿಕವಾಗಿ ಬಲಿಷ್ಠರಾಗಬೇಕು.

* ಆಗಾಗ ತುಸು ವಿರಾಮವನ್ನು ಹೊಂದಬೇಕು... ನಮ್ಮ ಮೆದುಳು ಒತ್ತಡದಲ್ಲಿರುವಾಗ ಕಲಿಯುವುದಕ್ಕಿಂತ ಹೆಚ್ಚು ವಿಷಯಗಳನ್ನು ವಿರಾಮದಲ್ಲಿ ಅರ್ಥ ಮಾಡಿಕೊಳ್ಳುತ್ತದೆ ಹಾಗೂ ಕಲಿಯುತ್ತದೆ.. ಈ ರೀತಿ ವಿರಾಮದ ನಂತರ ಮತ್ತೆ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಾಗ ಶೇಕಡ 31 ರಷ್ಟು ಮೆದುಳಿನ ಪ್ರಗತಿ ಹೆಚ್ಚುತ್ತದೆ. ಪ್ರತಿದಿನ ಕನಿಷ್ಠ 3 ರಿಂದ ಗರಿಷ್ಠ 10 ನಿಮಿಷಗಳ ಕಾಲ ವಿರಾಮವನ್ನು ನೀಡಬೇಕು.... ಎಷ್ಟೋ ಬಾರಿ ಮಧ್ಯಾಹ್ನ ನಾವು ತೆಗೆದುಕೊಳ್ಳುವ ಹತ್ತು ನಿಮಿಷಗಳ ಪವರ್ ನ್ಯಾಪ್ ನಮ್ಮಲ್ಲಿ ಮುಂದಿನ ನಾಲ್ಕೈದು ಗಂಟೆಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುವಲ್ಲಿ ಸಹಾಯಕವಾಗುತ್ತದೆ ಅಲ್ಲವೇ ?

*ನಮ್ಮ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಮ್ಮದೇ ಆಗಿರಬೇಕು ಹೊಸ ಹೊಸ ವಿಷಯಗಳನ್ನು ಕಲಿಯುತ್ತಾ ನಮ್ಮ ನರ ಕೋಶಗಳಲ್ಲಿ ಹೊಸ ನ್ಯೂರಾನ್ಗಳನ್ನು ಸೃಷ್ಟಿಸಲು ಅನುವು ಮಾಡಿಕೊಡಬೇಕು. ಅಸಲಿಗೆ ಬಡ್ಡಿಯು ಹೆಚ್ಚಾಗುವಂತೆ ಜ್ಞಾನವು ನಮ್ಮಲ್ಲಿ ಹೆಚ್ಚುತ್ತಾ ಹೋಗುತ್ತದೆ. ಪ್ರತಿದಿನ ಕನಿಷ್ಠ 20 ಪುಟಗಳಷ್ಟು ಓದಲೇಬೇಕು.

*ನಿಮಗೆ ನಿಮ್ಮದೇ ಆದ ಒಂದು ಪುಟ್ಟ ಸ್ಪೇಸ್ ಇರಲೇಬೇಕು. ಅದು ನಿಮಗೆ ವಿರಾಮವನ್ನು ನೀಡುವ ಮೂಲಕ ನಿಮ್ಮ ಕಾರ್ಯ ಕ್ಷಮತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಯೋಚನೆಗಳು ಕಾರ್ಯಗತ ಮಾಡುವ ಮುನ್ನವೇ ಆ ಕುರಿತು ಮಾತನಾಡಬೇಡಿ.

*ಇತರರು ನಿಮ್ಮನ್ನು ಹೊಗಳುವಾಗ ನಗು ಮುಖದಿಂದ ಆ ಹೊಗಳಿಕೆಯನ್ನು ಸ್ವೀಕರಿಸಿ. ಧನಾತ್ಮಕ ಹೊಗಳಿಕೆಗಳು ನಿಮ್ಮಲ್ಲಿ ಮಾನಸಿಕ ದೃಢತೆಯನ್ನು ತರುತ್ತವೆ... ಕೃತಜ್ಞತಾ ಭಾವವು ನಿಮ್ಮಲ್ಲಿ ಧನ್ಯತೆಯ ಭಾವವನ್ನು ಮೂಡಿಸುತ್ತದೆ. ಅತ್ಯಂತ ಸರಳವಾಗಿ ಧನ್ಯವಾದವನ್ನು ಸೂಚಿಸಿ. ಈ ರೀತಿ ವೈಜ್ಞಾನಿಕವಾಗಿ ಚಿಕ್ಕ ಪುಟ್ಟ ವರ್ತನೆಗಳಲ್ಲಿನ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ನಾವು ನಮ್ಮ ಮೆದುಳಿನ ನರಕೋಶಗಳನ್ನು ಸದಾ ಚಟುವಟಿಕೆಯಿಂದ ಇರುವಂತೆ ಮಾಡಬೇಕು... ಪ್ರತಿ ಪುಟ್ಟ ಗೆಲುವು ಕೂಡ ನಮ್ಮನ್ನು ಮಾನಸಿಕವಾಗಿ ದೃಢವಾಗಿಸುತ್ತದೆ.... ನಮ್ಮ ಮೇಲೆ ನಮಗೆ ನಂಬಿಕೆ ಮತ್ತು ಆತ್ಮ ವಿಶ್ವಾಸ ಹೆಚ್ಚುತ್ತದೆ.

*ಯಾವುದಾದರೂ ಒಂದು ಒಳ್ಳೆಯ ಹವ್ಯಾಸವನ್ನು ನಿಮ್ಮದಾಗಿಸಿಕೊಳ್ಳಿ ಒಂದು ಮಂಡಲದ ಕಾಲ ಅಂದರೆ ಸರಿಸುಮಾರು 40 ದಿನಗಳ ಕಾಲ ಅದನ್ನು ಸತತವಾಗಿ ಮಾಡುತ್ತಾ ಬನ್ನಿ. ಆಗ ಅದು ನಿಮ್ಮ ದೈನಂದಿನ ಬದುಕಿನ ಒಂದು ಕೆಲಸವಾಗುತ್ತದೆ.


ತಡ ಏಕೆ ಸ್ನೇಹಿತರೆ ? ವಯಸ್ಸಾಗುವುದು ದೇಹಕ್ಕೆ ಹೊರತು ಮನಸ್ಸಿಗಲ್ಲ ಈಗಲೂ ಕೂಡ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ ನಮ್ಮ ಬದುಕಿನಲ್ಲಿ ನಾವೇ ಅಗ್ರಗಣ್ಯರಾಗುವ... ಏನಂತೀರಾ



ವೀಣಾ ಹೇಮಂತ್ ಗೌಡ ಪಾಟೀಲ್

# ಆಸ್ತಿ ಪತ್ರ, ಚಿನ್ನದೊಂದಿಗೆ ಮಹಿಳೆ ನಿಗೂಢವಾಗಿ ನಾಪತ್ತೆ

ಚಿಕ್ಕಮಗಳೂರು: ಕೋರ್ಟ್ ವಿಚಾರಣೆಗಾಗಿ ಚಿಕ್ಕಮಗಳೂ-ರಿಗೆ ಹೋಗಿ ಬರುವುದಾಗಿ ಹೇಳಿ ಹೋದ ಮಹಿಳೆಯೊಬ್ಬರು ಮನೆಯಲ್ಲಿದ್ದ ನೂರಾರು ಗ್ರಾಂ ಚಿನ್ನಾಭರಣ ಹಾಗೂ ಕೋಟ್ಯಂತರ ರೂಪಾಯಿ ಮೌಲ್ಯದ ಬ್ಯಾಂಕ್ ಆಸ್ತಿ ಪತ್ರಗಳೊಂದಿಗೆ ನಿಗೂಢವಾಗಿ ನಾಪತ್ತೆಯಾಗಿರುವ ಆಘಾತಕಾರಿ ಘಟನೆ ಕಡೂರು ತಾಲೂಕು ಸಿಂಗಟಗೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ತಾಲೂಕಿನ ಹುಲಿಗೆರೆ ಯಗಟಿ ಗ್ರಾಮದ ಸುಜಾತ (42) ನಾಪತ್ತೆಯಾದ ಮಹಿಳೆ. ಇವರ ಪತಿ ಸುಮಾರು 10 ವರ್ಷಗಳ ಹಿಂದೆಯೇ ನಿಧನರಾಗಿದ್ದರು. ಪತಿಯ ಅಗಲಿಕೆಯ ನಂತರ ಕಳೆದ 8 ವರ್ಷಗಳಿಂದ ಸುಜಾತ ಅವರು ಹುಲಿಗೆರೆ ಯಗಟಿಯಲ್ಲಿರುವ ತಮ ತಂದೆಯ ಮನೆಯಲ್ಲೇ ಆಶ್ರಯ ಪಡೆದಿದ್ದು, ತಂದೆ ಮತ್ತು ಸೋದರ ಯೋಗೀಶ್ ಇವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಸುಜಾತ ಅವರು ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಇಂದು ನನ್ನ ಕೇಸಿನ ವಿಚಾರಣೆ ಇದೆ ಎಂದು ಹೇಳಿ ಮನೆಯಿಂದ ಹೊರಟಿದ್ದರು. ಆದರೆ ಮನೆಯಲ್ಲಿದ್ದ ದಾಖಲೆ ಪತ್ರ ಹಾಗೂ ಚಿನ್ನಾಭರಣಗಳೊಂದಿಗೆ ನಾಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

## ಹುಟ್ಟುಹಬ್ಬದ ಸಂಭ್ರಮದಲ್ಲಿ ತಮಿಳುನಾಡು ಸಿಎಂ ವಿಜಯ್, ಶುಭಾಶಯ ಕೋರಿದ ಗಣ್ಯರು

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮಿಳುನಾಡು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಅವ-ರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು ಮತ್ತು ತಮಿಳು ಜನರ ಹಕ್ಕುಗಳು, ಘನತೆ ಮತ್ತು ಆಕಾಂಕ್ಷೆಗಳನ್ನು ರಕ್ಷಿಸುವಲ್ಲಿ ಹಾಗೂ ರಾಜ್ಯದ ಪ್ರಗತಿಗಾಗಿ ಒಟ್ಟಾಗಿ ಕೆಲಸ ಮಾಡುವಲ್ಲಿ ಟಿವಿಕೆ ಮುಖ್ಯಸ್ಥರೊಂದಿಗೆ ನಿಲ್ಲುವುದಾಗಿ ಹೇಳಿದರು.



ಮೇ 10 ರಂದು ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ವಿಜಯ್ ಅವರಿಗೆ ಇಂದು 52 ವರ್ಷ ತುಂಬಿರುವ ಹಿನ್ನಲೆಯಲ್ಲಿ ಫಿಪೋಸ್ಟ್‌ನಲ್ಲಿ ಗಾಂಧಿ ಅವರು ಶುಭಾಷಯ ಕೋರಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿ ತಿರು ಜೋಸೆಫ್ ವಿಜಯ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ನಿಮಗೆ ಉತ್ತಮ ಆರೋಗ್ಯ ಮತ್ತು ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು. ತಮಿಳು ಜನರ ಹಕ್ಕುಗಳು, ಘನತೆ ಮತ್ತು ಆಕಾಂಕ್ಷೆಗಳನ್ನು ರಕ್ಷಿಸುವಲ್ಲಿ ಮತ್ತು ರಾಜ್ಯದ ಪ್ರಗತಿಗಾಗಿ ಒಟ್ಟಾಗಿ ಕೆಲಸ ಮಾಡುವಲ್ಲಿ ನಾನು ನಿಮ್ಮೊಂದಿಗೆ ನಿಲ್ಲುತ್ತೇನೆ ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಹೇಳಿದರು. ಈ ವರ್ಷದ ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್ ನಟ-ರಾಜಕಾರಣಿ ವಿಜಯ್ ಅವರ ಟಿವಿಕೆ ಜೊತೆ ಕೈಜೋಡಿಸಿತು ಮತ್ತು ತಮಿಳುನಾಡು ಸರ್ಕಾರದ ಭಾಗವಾಗಿದೆ.

## ನೀಟ್ ಪರೀಕ್ಷೆ ಕುರಿತು ಸುಳ್ಳು ಸುದ್ದಿ ಹಬ್ಬಿಸಿದರೆ ಕಠಿಣ ಕ್ರಮ : ಎನ್‌ಟಿಎ ಎಚ್ಚರಿಕೆ

ನವದೆಹಲಿ: ವೈದ್ಯಕೀಯ ಪ್ರವೇಶಾತಿ ಕೋರ್ಸ್ ಗಳಿಗೆ ನಡೆದ ನೀಟ್-ಯುಜಿ 2026 ಪರೀಕ್ಷೆ ಸಂಬಂಧ ಅನಗತ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿದರೆ ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಎಚ್ಚರಿಕೆ ನೀಡಿದೆ.




ವಿದ್ಯಾರ್ಥಿಗಳನ್ನು ವಂಚಿಸಲು ಅಥವಾ ಅವರಿಗೆ ತಪ್ಪು ಮಾಹಿತಿ ನೀಡುವುದು ಇಲ್ಲವೇ ಉದ್ದೇಶಪೂರ್ವಕವಾಗಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದರೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸುಳ್ಳುಸು ಹಬ್ಬಿಸುವುದು ಇಲ್ಲವೇ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳನ್ನು ಪ್ರಸಾರ ಮಾಡುವುದು ಗಂಭೀರ ಅಪರಾಧವಾಗಿದೆ. ಸೆಕ್ಷನ್ 14 ಸಿ ಪ್ರಕಾರ ಇಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಎನ್‌ಟಿಎ ಹಿಂದೆ ಮುಂದೆ ನೋಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟಿದೆ.ನಿನ್ನೆ ದೇಶದದ್ಯಾಂತ ನೀಟ್ ? ಯುಜಿ 2026 ಮರು ಪರೀಕ್ಷೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಸುಳ್ಳು ಸುದ್ದಿಗಳು ಮತ್ತು ವಿಡಿಯೋಗಳು ಹರಿದಾಡುತ್ತಿರುವುದು ನಮ ಗಮನಕ್ಕೆ ಬಂದಿದೆ. ಇದು ಸಂಪೂರ್ಣವಾಗಿ ನಕಲಿ ಮತ್ತು ಸುಳ್ಳು ಸುದ್ದಿ ಇದನ್ನು ಯಾರು ನಂಬಬಾರದೆಂದು ಮನವಿ ಮಾಡಿದೆ. ನೀಟ್ ಪರೀಕ್ಷೆಯನ್ನು ಅತ್ಯಂತ ಪಾರದರ್ಶಕತೆ, ಸಮಗ್ರಭದ್ರತೆ ಮತ್ತು ಕಣ್ಗಾವಲಿನಲ್ಲಿ ಯಶಸ್ವಿಯಾಗಿ ನಡೆಸಿದೆ. ಕೆಲವರು ದುರುದ್ದೇಶ ಪೂರ್ವಕವಾಗಿ ಸಾಮಾಜಿಕ ಜಾಲತಾಣಗಳಲ್ಲಿ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಸಂಸ್ಥೆಯು ಅಸಮಾಧಾನ ವ್ಯಕ್ತಪಡಿಸಿದೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಧಿಕೃತವಾಗಿ ಎನ್‌ಟಿಎನ ಅಧಿಕೃತ ವೆಬ್ ಸೈಟ್ ಟಿಜಜಣ.ಟಿಣಚಿ.ಟುಡಿ.ಟಿ ಅನ್ನು ಪರಿಶೀಲಿಸಬೇಕು. ಸತ್ಯ ಸತ್ಯತೆಯನ್ನು ಪರಮಾರ್ಶೆ ಮಾಡದೆ, ಯಾವುದೇ ವದಂತಿಗಳನ್ನು ನಂಬಬೇಡಿ. ನಮ 20 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಂತ ಮತ್ತು ಸಹನೆಯಿಂದ ನಡೆದುಕೊಳ್ಳಬೇಕೆಂದು ಎನ್‌ಟಿಎ ಮನವಿ ಮಾಡಿದೆ.

# ಯೋಗದಿಂದ ಆರೋಗ್ಯಕರ ಜೀವನ ಸಾಧ್ಯ ಪ್ರಧಾನ ಅಂಚೆ ಪಾಲಕ ಶರಣಪ್ಪ ನಾಯ್ಕರ

ಗದಗ: ಪ್ರತಿದಿನ ಯೋಗ ಮಾಡುವದ-ರಿಂದ ಮಾನಸಿಕ ದೈಹಿಕ ಹಾಗೂ ಆದ-ನ್ಯಾತ್ಮಿಕ ಆರೋಗ್ಯಕರ ಜೀವನ ಪಡೆಯಲು ಸಾಧ್ಯವಾಗಲಿದೆ ಎಂದು ಪ್ರಧಾನ ಅಂಚೆ ಪಾಲಕರಾದ ಶರಣಪ್ಪ ನಾಯ್ಕರ ಹೇಳಿದರು. ಭಾರತೀಯ ಅಂಚೆ ಇಲಾಖೆಯ ಗದಗ ವಿಭಾಗೀಯ ಕಚೇರಿ ಹಾಗೂ ಮನರಂಜನಾ ಕೂಟದ ಆಶ್ರಯದಲ್ಲಿ ಭಾನುವಾರ ಪ್ರಧಾನ ಅಂಚೆ ಕಚೇರಿಯಲ್ಲಿ ಈಶ್ವರಿ ವಿಶ್ವವಿದ್ಯಾಲಯದ ಅಕ್ಕ ಅವರ ಮಾರ್ಗದರ್ಶನದಲ್ಲಿ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನದಲ್ಲಿ ಪಾಲ್ಗೊಂಡು ಚಾಲನೆ ನೀಡಿ ಅವರು ಮಾತನಾಡಿ, ಯೋಗಾಭ್ಯಾಸದಿಂದ ದೇಹದ ಲವಲವಿಕೆ ಹೆಚ್ಚುತ್ತದೆ, ಒತ್ತಡ ಕಡಿಮೆಯಾಗುತ್ತದೆ, ಮನಸ್ಸು ಶಾಂತವಾಗುತ್ತದೆ ಹಾಗೂ ಏಕಾಗ್ರತೆ ವೃದ್ಧಿಯಾಗುತ್ತದೆ ಎಂದರು.

ಇಂದಿನ ವೇಗದ ಜೀವನದಲ್ಲಿ ಯೋಗವು ಮಾನಸಿಕ ನೆಮ್ಮದಿ ಮತ್ತು ದೈಹಿಕ ಸದೃಢತೆಯನ್ನು ಕಾಪಾಡುವ ಪರಿಣಾಮಕಾರಿ ಸಾಧನವಾಗಿದೆ ಎಂದರು. ರೋಣ ಉಪ ವಿಭಾಗದ ಅಂಚೆ ನಿರೀಕ್ಷ ವೆಂಕಟೇಶರಡ್ಡಿ ಕೊಳ್ಳಿ ಅವರು



ಮಾತನಾಡಿ, ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಪ್ರತಿಯೊಬ್ಬ-ರಿಗೂ ಯೋಗದ ಅಗತ್ಯವಿದೆ ಎಂದರು. ದಿನನಿತ್ಯ ಯೋಗ ಅಭ್ಯಾಸ ರೂಢಿಸಿಕೊಳ್ಳಬೇಕು. ಇದರಿಂದ ರೋಗ-ರುಜಿನಗಳಿಂದ ದೂರವಿರಲು ಅನುಕೂಲವಾಗಿದೆ. ಅಷ್ಟೇ, ಅಲ್ಲದೇ ಯೋಗದಿಂದ ವೈಯಕ್ತಿಕ ಆರೋಗ್ಯವೃದ್ಧಿಯಾಗುವುದಲ್ಲದೆ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೂ ಪೂರಕವಾಗಲಿದೆ. ಹೀಗಾಗಿ ಎಲ್ಲರೂ ಯೋಗಾಭ್ಯಾಸವನ್ನು ಪ್ರತಿ ದಿನ ಕುಟುಂಬ ಸಮೇತ ಕೆಲವು ಗಂಟೆ ಯೋಗಭ್ಯಾಕ್ಕೆ ನೀಡಲು ಮುಂದಾಗಬೇಕು ಎಂದರು.

ಬ್ರಹ್ಮ ಕುಮಾರಿ ಸಾವಿತ್ರಿ ಅಕ್ಕ ಯೋಗ ಶಿಬಿರ ನಡೆಸಿ,ಯೋಗವು ಪ್ರಾಚೀನ ಭಾರತದ ಅಮೂಲ್ಯ ಕೊಡುಗೆಯಾಗಿದೆ. ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವಲ್ಲಿ ಯೋಗದ ಪಾತ್ರ ಮಹತ್ವದ್ದು. ಪ್ರತಿವರ್ಷ ಒಂದೊಂದು ಥೀಮ್‌ನಲ್ಲಿ ಯೋಗ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಥೀಮ್ ಆಗಿದೆ. ಹಾಗಾಗಿ ಯೋಗದಿಂದ ಆರೋಗ್ಯ, ಪ್ರಾಣಾಯಾಮದಿಂದ ಮನಶಾಂತಿ, ಜ್ಞಾನದಿಂದ ಜೀವನದ ಸಾರ್ಥಕತೆ ದೊರೆಯುತ್ತದೆ. ಯೋಗವನ್ನು ಪ್ರತಿದಿನ ಅಭ್ಯಾಸ ಮಾಡುವುದರಿಂದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಪಡೆಯಲು ಪ್ರತಿಯೊಬ್ಬರು ಸಂಕಲ್ಪ ತೋರಬೇಕು ಎಂದರು.

ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ. ಅದು ದೇಹ, ಮನಸ್ಸು, ಆತ್ಮ ಮತ್ತು ಚೇತನದ ಸಮನ್ವಯ ಸಾಧಿಸುವ ಜೀವನ ವಿಧಾನವಾಗಿದೆ. ಯೋಗಾಸನಗಳು ದೇಹವನ್ನು ಆರೋಗ್ಯವಂತ ಹಾಗೂ ಬಲಿಷ್ಠವಾಗಿಸಿದರೆ, ಪ್ರಾಣಾಯಾಮ ಮನಸ್ಸಿಗೆ ಶಾಂತಿ ಮತ್ತು ಸ್ಥಿರತೆಯನ್ನು ನೀಡುತ್ತದೆ. ಧ್ಯಾನವು ಆತ್ಮಜ್ಞಾನವನ್ನು ಬೆಳೆಸಿ ಚೇತನವನ್ನು ಉನ್ನತ ಮಟ್ಟಕ್ಕೆ ಬೆಳೆಸಲು ಸಹಕಾರಿಯಾಗಿವೆ ಎಂದರು.

ಇದೇ ವೇಳೆ ಯೋಗದಲ್ಲಿ ಪಾಲ್ಗೊಂಡಿದ್ದವರಿಗೆ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಹೆಸರಿನಲ್ಲಿ ಸಂಕಲ್ಪ ಭೋಧಿಸಿದರು. ಅಂಚೆ ಕಚೇರಿಗಳಲ್ಲಿ ಯೋಗ ಶಿಬಿರಗಳು, ಪರಿಸರ ದಿನಾಚರಣೆ, ಜನರಲ್ಲಿ ಜಾಗೃತಿ ವಿವಿಧ ಪ್ರದರ್ಶನಗಳು ಮತ್ತು ಅರಿವು ಮೂಡಿಸುವ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿರುವದು ಸಂತಸ ತಂದಿದೆ ಎಂದರು. ಉಪ ಅಂಚೆ ಪಾಲಕರಾದ ಡಿ.ಜಿ.ಮ್ಯಾಗೇರಿ, ಬ್ರಹ್ಮಕುಮಾರಿ ಬಿ.ಕೆ.ಮಮತಾ ಅಕ್ಕ, ಶ್ರೀಮತಿ ಶೋಭಾ ಬೆಂಗಳೂರ ಹಾಗೂ ವಿವಿಧ ಅಂಚೆ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು. ವೆಂಕಟೇಶ ಆಕಳವಾಡಿ ನಿರೂಪಿಸಿ, ವಂದಿಸಿದರು.

# ಅಬಕಾರಿ ಇಲಾಖೆಯ ಇತಿಹಾಸದಲ್ಲಿ ಕ್ರಾಂತಿಕಾರಕ ತಿರುವು ತಂದ ರಾಜ್ಯ ಸರ್ಕಾರದ ಆದೇಶ

ಬೆಂಗಳೂರು: ಕರ್ನಾಟಕ ಸರ್ಕಾರದ ಆದೇಶವು ರಾಜ್ಯದ ಅಬಕಾರಿ ಇಲಾಖೆಯ ಇತಿಹಾಸದಲ್ಲಿ ಕ್ರಾಂತಿಕಾರಕ ತಿರುವು ತಂದಿದೆ.ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುವ ಈ ನಿರ್ಧಾರವು ಕೇವಲ ಆಡಳಿತಾತಕ ತಿದ್ದುಪಡಿ ಅಲ್ಲ. ಇದು ಸಾಮಾಜಿಕ ನ್ಯಾಯದ ಹೊಸ ಪರಿಕಲ್ಪನೆಗೆ ಜೀವ ತುಂಬಿದ ಹೆಜ್ಜೆ. ಇತರ ರಾಜ್ಯಗಳಲ್ಲಿ ಇಂತಹ ಮೀಸಲಾತಿ ವ್ಯವಸ್ಥೆ ಇಲ್ಲದಿರುವುದರಿಂದ, ಕರ್ನಾಟಕವು ದೇಶದಾದ್ಯಂತ ಸಾಮಾಜಿಕ ಒಳಗೊಳ್ಳುವಿಕೆಯ ಮಾದರಿಯಾಗಿ ಹೊರಹೊಮ್ಮಿದೆ.

ಈ ಕ್ರಮದ ಮೂಲಕ ಸರ್ಕಾರವು ಆರ್ಥಿಕ ಅವಕಾಶಗಳ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವವನ್ನು ವ್ಯಾಪಾರ ಕ್ಷೇತ್ರದೊಳಗೂ ವಿಸ್ತರಿಸಿದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುವ ಸರ್ಕಾರದ ಆದೇಶ ಹೊರಬಂದಿದೆ. ಇದು ರಾಜ್ಯದ ಆಬಕಾರಿ ಇಲಾಖೆಯ ಇತಿಹಾಸದಲ್ಲೇ ಹೊಸ ಅಧ್ಯಾಯವನ್ನು ಆರಂಭಿಸಿದೆ. ಇತರ ರಾಜ್ಯಗಳಲ್ಲಿ ಇಂತಹ ಮೀಸಲಾತಿ ಇಲ್ಲದಿರುವುದರಿಂದ, ಕರ್ನಾಟಕ ಈ ಕ್ರಮದ ಮೂಲಕ ಸಾಮಾಜಿಕ ನ್ಯಾಯದ ಹೊಸ ಮಾದರಿಯನ್ನು ಸ್ಥಾಪಿಸಿದೆ.

ಕರ್ನಾಟಕ ಸರ್ಕಾರವು ಇದೇ 17ರಂದು ಹೊರಡಿಸಿದ ಅಧಿಸೂಚನೆಯ ಪ್ರಕಾರ, ಕರ್ನಾಟಕ ಆಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 5ನೇ ನಿಯಮದಲ್ಲಿ ತಿದ್ದುಪಡಿ ಮಾಡಲಾಗಿದೆ.

ಈ ತಿದ್ದುಪಡಿಯಡಿ, ಅಐ-20 ಮತ್ತು ಅಐ-90 ಪರವಾನಗಿಗಳ ಇ-ಹರಾಜುಗಳಲ್ಲಿ ಮೀಸಲಾತಿ ಶೇಕಡಾವಾರು ಹಂಚಿಕೆ ಈ ರೀತಿಯಾಗಿದೆ. ಪರಿಶಿಷ್ಟ ಜಾತಿ-ಂಗೆ 5.25%, ಪರಿಶಿಷ್ಟ ಜಾತಿ-ಃಗೆ 5.25%, ಪರಿಶಿಷ್ಟ ಜಾತಿ-ಅಗೆ 4.5%, ಮತ್ತು ಪರಿಶಿಷ್ಟ ಪಂಗಡಕ್ಕೆ 3% ಮೀಸಲಾತಿ. ಈ ಆದೇಶವನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ, ಭೀಮಪ್ಪ ಪಿ. ಅಜೂರ್, ಹಣಕಾಸು ಇಲಾಖೆಯ ಅಧೀನ ಕಾರ್ಯದರ್ಶಿ (ಆಬಕಾರಿ) ಸಹಿ ಮಾಡಿದ್ದಾರೆ. ಈ ಕ್ರಮವು ಕರ್ನಾಟಕದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಸಾಮಾಜಿಕ ಮೀಸಲಾತಿ ನೀಡುವ ಪ್ರಯತ್ನವಾಗಿದೆ.

ಇದುವರೆಗೆ ಯಾವುದೇ ರಾಜ್ಯದಲ್ಲಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಅಥವಾ ಕೇರಳ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಅಥವಾ ಪಂಗಡಗಳಿಗೆ ಮೀಸಲಾತಿ ನೀಡುವ ನಿಯಮಗಳಿಲ್ಲ. ಇತರ ರಾಜ್ಯಗಳಲ್ಲಿ ಆಬಕಾರಿ




ಪರವಾನಗಿಗಳು ಸಾಮಾನ್ಯವಾಗಿ ಆರ್ಥಿಕ ಅರ್ಹತೆ, ತೆರಿಗೆ ಪಾವತಿ ಸಾಮರ್ಥ್ಯ ಮತ್ತು ವ್ಯಾಪಾರ ಅನುಭವದ ಆಧಾರದ ಮೇಲೆ ನೀಡಲಾಗುತ್ತವೆ. ಆದರೆ ಸಾಮಾಜಿಕ ನ್ಯಾಯದ ಅಂಶವನ್ನು ಒಳಗೊಂಡಿಲ್ಲ. ಕರ್ನಾಟಕ ಸರ್ಕಾರದ ಈ ಕ್ರಮವು ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅವಕಾಶಗಳ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವ್ಯಾಪಾ-ರಿಗಳಿಗೆ ಮದ್ಯ ಪರವಾನಗಿ ಕ್ಷೇತ್ರದಲ್ಲಿ ಪ್ರವೇಶದ ಅವಕಾಶ ದೊರಕುವುದರಿಂದ, ಅವರು ಆಬಕಾರಿ ವ್ಯಾಪಾರದಲ್ಲಿ ಪಾಲ್ಗೊಳ್ಳುವ ಮೂಲಕ ರಾಜ್ಯದ ಆದಾಯ ಮತ್ತು ಉದ್ಯೋಗಾವಕಾಶಗಳಲ್ಲಿ ತಮ ಪಾತ್ರವನ್ನು ವಿಸ್ತರಿಸಬಹುದು. ಈ ಆದೇಶವು 26 ಮೇ 2026ರಿಂದ ಜಾರಿಗೆ ಬರುತ್ತದೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇ-ಹರಾಜು ಪ್ರಕ್ರಿಯೆಗಳಲ್ಲಿ ಈ ಮೀಸಲಾತಿ ಅನ್ವಯವಾಗಲಿದೆ. ಸರ್ಕಾರದ ಅಧಿಕೃತ ಪ್ರಕಟಣೆಯ ಪ್ರಕಾರ, ಈ ತಿದ್ದುಪಡಿ ಕರ್ನಾಟಕ ಆಬಕಾರಿ ಕಾಯ್ದೆ, 1965ರ 71ನೇ ವಿಧಿಯಡಿ ಮಾಡಲಾಗಿದೆ.

ಈ ಕ್ರಮದ ಪರಿಣಾಮವಾಗಿ, ಕರ್ನಾಟಕವು ದೇಶದ ಮೊದಲ ರಾಜ್ಯವಾಗಿ ಮದ್ಯ ಪರವಾನಗಿ ಹರಾಜುಗಳಲ್ಲಿ ಸಾಮಾಜಿ-ಕ ಮೀಸಲಾತಿ ನೀಡುವ ರಾಜ್ಯವಾಗಿ ಗುರುತಿಸಲ್ಪಟ್ಟಿದೆ. ಇದು ರಾಜ್ಯದ ಆಬಕಾರಿ ನೀತಿಯಲ್ಲಿ ಸಾಮಾಜಿಕ ಒಳಗೊಳ್ಳುವಿಕೆಯ ಹೊಸ ಮಾದರಿಯನ್ನು ಸ್ಥಾಪಿಸಿದೆ.

# ಅಮೆರಿಕದ ಅಪಾಚೆ ಹೆಲಿಕಾಪ್ಟರ್, ಅಲ್ಟ್ರಾಲೈಟ್ ಹೊವಿಟ್ಜರ್‌ಗಳು ಭಾರತಕ್ಕೆ ಮಾರಾಟ

ವಾಷಿಂಗ್ಟನ್: ಭಾರತದ ಅಪಾಚೆ ಹೆಲಿಕಾಪ್ಟರ್‌ಗಳು ಮತ್ತು ಎಂ777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳಿಗೆ ಸುಸ್ಥಿರ ಬೆಂಬಲ ಸೇವೆಗಳು ಮತ್ತು ಸಂಬಂಧಿತ ಉಪಕರಣಗಳ ಮಾರಾಟದ ಪ್ರಸ್ತಾವಿತ ಅಧಿಸೂಚನೆಯನ್ನು ಅಮೆರಿಕ ಔಪಚಾರಿಕವಾಗಿ ಪ್ರಕಟಿಸಿದೆ, ಇದರ ಅಂದಾಜು ವೆಚ್ಚ 482.2 ಮಿಲಿಯನ್‌ಗಳಾಗಿದೆ.

ಅಮೆರಿಕದ ವಿದೇಶಿ ಮಿಲಿಟರಿ ಮಾರಾಟ ಕಾರ್ಯಕ್ರಮವನ್ನು ನಿರ್ವಹಿಸುವ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆ ಜೂನ್ 17 ರಂದು ಫೆಡರಲ್ ರಿಜಿಸ್ಟರ್‌ನಲ್ಲಿ ಶಸ್ತ್ರಾಸ್ತ್ರ ಮಾರಾಟ ಅಧಿಸೂಚನೆಯನ್ನು ಹೊರಡಿಸಿತು.ಮೇ 18 ರಂದು, ವಿದೇಶಾಂಗ ಇಲಾಖೆಯು ಭಾರತಕ್ಕೆ ಅಪಾಚೆ ಹೆಲಿಕಾಪ್ಟರ್‌ಗಳು ಮತ್ತು ಎಂ777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳ ಸೇವೆಗಳ ಸಂಭಾವ್ಯ ಮಾರಾಟದ ಬಗ್ಗೆ ಯುಎಸ್ ಕಾಂಗ್ರೆಸ್‌ಗೆ ಮಾಹಿತಿ ನೀಡಿತು. ವಿಶೇಷವಾಗಿ ಪರ್ವತ ಪ್ರದೇಶಗಳಲ್ಲಿ ತನ್ನ ಫಿರಂಗಿ ಸಾಮರ್ಥ್ಯಗಳನ್ನು ಹೆಚ್ಚಿಸಲು, ವಿದೇಶಿ ಮಿಲಿಟರಿ ಮಾರಾಟ ಮಾರ್ಗದ





ಅಡಿಯಲ್ಲಿ ಯುಎಸ್‌ನಿಂದ ಖರೀದಿಸಲಾದ ಎಂ777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳನ್ನು ಭಾರತ ಸೇರಿಸಿಕೊಂಡಿತು.ಭಾರತೀಯ ಸೇನೆಯು ವಿಶ್ವದ ಅತ್ಯಂತ ಮುಂದುವರಿದ ಯುದ್ಧ ಹೆಲಿಕಾಪ್ಟರ್‌ಗಳಲ್ಲಿ ಒಂದೆಂದು ಪರಿಗಣಿಸಲಾದ ಎಎಚ್-64ಇ ಅಪಾಚೆ ದಾಳಿ ಹೆಲಿಕಾಪ್ಟರ್‌ಗಳನ್ನು ಸಹ ನಿಖರವಾದ ದಾಳಿ ಮತ್ತು ಯುದ್ಧಭೂಮಿ ಬೆಂಬಲ ಕಾರ್ಯಾಚರಣೆಗಳಿಗಾಗಿ ನಿರ್ವಹಿಸುತ್ತದೆ. ಅಧಿಸೂಚನೆಯ ಪ್ರಕಾರ, ಭಾರತವು ತನ್ನ ಎಂ777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳಿಗೆ ದೀರ್ಘಾವಧಿಯ ಸುಸ್ಥಿರ ಬೆಂಬಲವನ್ನು ಕೋ-ರಿದೆ.ಈ ಕೆಳಗಿನ ಪ್ರಮುಖವಲ್ಲದ ರಕ್ಷಣಾ ಉಪಕರಣಗಳನ್ನು ಸೇರಿಸಲಾಗುವುದು: ಪೂರಕ ವಸ್ತುಗಳು; ಬಿಡಿಭಾಗಗಳು; ದುರಸ್ತಿ ಮತ್ತು ಹಿಂತಿ-ರುಗಿಸುವಿಕೆ; ತರಬೇತಿ; ತಾಂತ್ರಿಕ ನೆರವು; ಕ್ಷೇತ್ರ ಸೇವಾ ಪ್ರತಿನಿಧಿ; ಡಿಪೋ ಸಾಮರ್ಥ್ಯ; ಮತ್ತು ಲಾಜಿಸ್ಟಿಕ್?ಸ ಮತ್ತು ಪ್ರೋಗ್ರಾಂ ಬೆಂಬಲದ ಇತರ ಸಂಬಂಧಿತ ಅಂಶಗಳು.

ಅಂದಾಜು ಒಟ್ಟು ವೆಚ್ಚ 230 ಮಿಲಿಯನ್, ಅಧಿಸೂಚನೆಯಲ್ಲಿ ತಿಳಿಸಲಾಗಿದೆ.ಪ್ರತ್ಯೇಕ ಅಧಿಸೂಚನೆಯಲ್ಲಿ, ರಕ್ಷಣಾ ಇಲಾಖೆಯು ಭಾರತವು ಎಎಚ್-64ಇ ಅಪಾಚೆ ಸುಸ್ಥಿರ ಬೆಂಬಲ ಸೇವೆಗಳು, ಸರ್ಕಾರ ಮತ್ತು ಗುತ್ತಿಗೆದಾರ ಎಂಜಿನಿಯರಿಂಗ್, ತಾಂತ್ರಿಕ ಮತ್ತು ಲಾಜಿಸ್ಟಿಕ್?ಸ ಬೆಂಬಲ ಸೇವೆಗಳು, ತಾಂತ್ರಿಕ ದತ್ತಾಂಶ ಮತ್ತು ಪ್ರಕಟಣೆಗಳು, ಸಿಬ್ಬಂದಿ ತರಬೇತಿ ಮತ್ತು ಇತರ ಸಂಬಂಧಿತ ಲಾಜಿಸ್ಟಿಕ್ಸ್ ಮತ್ತು ಪ್ರೋಗ್ರಾಂ ಬೆಂಬಲವನ್ನು ಕೋರಿದೆ ಎಂದು ತಿಳಿಸಿದೆ.

ಅಪಾಚೆ ಬೆಂಬಲ ಪ್ಯಾಕೇಜ್‌ನ ಅಂ-ದಾಜು ವೆಚ್ಚ 198.2 ಮಿಲಿಯನ್.ಅಪಾಚೆ ಬೆಂಬಲ ಸೇವೆಗಳ ಒಪ್ಪಂದದ ಪ್ರಮುಖ ಗುತ್ತಿಗೆದಾರರು ಬೋಯಿಂಗ್ ಕಂಪನಿ ಮತ್ತು ಲಾಕ್‌ಹೀಡ್ ಮಾರ್ಟಿನ್ ಆಗಿದ್ದರೆ, ಯ ಕುಂಬ್ರಿಯಾದಲ್ಲಿರುವ ಸಿಸ್ಟಮ್ಸ್ ಎಂ777ಎ2 ಹೋವಿಟ್ಜರ್ ಬೆಂಬಲ ಕಾರ್ಯಕ್ರಮದ ಪ್ರಮುಖ ಗುತ್ತಿಗೆದಾರರಾಗಿರುತ್ತಾರೆ.

# ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಗದಗ ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ

ಗದಗ: ಕರ್ನಾಟಕ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಗದಗ ಜಿಲ್ಲಾ ಘಟಕದ 2026?28ನೇ ಸಾಲಿನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಎಲ್ಲ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಾ. ಕಳಕೇಶ ಉಳಕ್ಕಿ ಪ್ರಕಟಿಸಿದ್ದಾರೆ.

ಸಂಘದ ಗೌರವ ಅಧ್ಯಕ್ಷರಾಗಿ ಕುಮಾರ್ ಕಟ್ಟಿಮನಿ, ಅಧ್ಯಕ್ಷರಾಗಿ ಮಂಜುನಾಥ ಮರಾಠೆ, ಉಪಾಧ್ಯಕ್ಷರಾಗಿ ಚಂದ್ರು ಪಾಟೀಲ್ ಹಾಗೂ ಜಿಲ್ಲಾ ಉಪಾಧ್ಯಕ್ಷೆಯಾಗಿ ಶಿಲ್ಪಾ ಬಂಡಿಹಾಳ್ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಶಶಿಕಾಂತ್ ಅಂಗಡಿ, ಜಂಟಿ ಕಾರ್ಯದರ್ಶಿಯಾಗಿ ಬಸವರಾಜ್ ಈರಣ್ಣವರ, ಖಜಾಂಚಿಯಾಗಿ ಪ್ರದೀಪ್ ಹಿರೇಮಠ್ ಆಯ್ಕೆಯಾಗಿದ್ದಾರೆ. ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳಾಗಿ ಧರ್ಮೇಂದ್ರ ಇಟಗಿ, ಶೇಖಸಾಬ್ ಕಾತರಕಿ, ಪ್ರವೀಣ್‌ಕುಮಾರ್ ಕನ್ಯಾಳ್, ಜಗದೀಶ್ ಬಳಿಗೇರ್, ಗಾಳೆಪ್ಪ ಹ-ರಿಜನ್ ಹಾಗೂ ಶಿವಯೋಗಿ ಭಾವಿ ಅವರು ಆಯ್ಕೆಯಾಗಿದ್ದಾರೆ. ಅವಿರೋಧವಾಗಿ ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಜಿಲ್ಲೆಯ



ಪತ್ರಕರ್ತರು ಅಭಿನಂದನೆ ಸಲ್ಲಿಸಿದ್ದು, ಸಂಘದ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ನೂತನ ತಂಡ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com